ಜನಪದ ವಿಚಾರ

ಬೆಲೆ : ರೂ ೨೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೭ ಮಾರ್ಚ್ -೨೦೧೭ ಸಂಚಿಕೆ - ೮

ಇಸ್ರೊ ಮತ್ತು ನಾಸಾ ಅಗತ್ಯವೇ?

*

ನಕಲಿ ಖಾದಿ ನಿಜ ಮೋದಿ

*

ನಾಥುರಾಮಗೆ ಬಾಪೂನ ಪತ್ರ

ಜನಪದ ವಿಚಾರದಲ್ಲಿ

ಮಾರ್ಚ್ – ೨೦೧೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮಾರ್ಚ್ - ೨೦೧೬
ಸಂಪುಟ - ೧೭
ಸಂಚಿಕೆ - ೮

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೨೦೦/-
ಬಿಡಿ ಸಂಚಿಕೆ : ರೂ ೨೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ಓ ಆತ್ಮ ಪಕ್ಷಿ

ಓ ಆತ್ಮ ಪಕ್ಷಿ
ಏಳು, ಮೇಲೇಳು! ಮತ್ತೊಮ್ಮೆ ಚಿಮ್ಮಿ
ಹಾರು ಬಿತ್ತರದ ಅನಂತತೆಯೆಡೆಗೆ.
ಹುಳುಹಿಡಿದು ಹಾಳಾಗಿರುವ ಹಳೇ
ನೆಚ್ಚುಗಳನ್ನೆಲ್ಲಾ,
ಕಳಚಿಕೊಚ್ಚಿ ಬಿಡು,
ಹೊಚ್ಚ ಹೊಸ ನೆಚ್ಚುಗಳ ರೆಕ್ಕೆಯನ್ನು
ಬಿಚ್ಚಿ.
ಬಾನೆಡೆಗೇರು, ಓ ಎನ್ನ ಆತ್ಮಪಕ್ಷಿ!
ನೂರು ಸಾರಿ ಸೋತಿದ್ದರೇನಂತೆ?
ನೂರೊಂದು ಸಾರಿ ಬಿದ್ದಿದ್ದರೇನಂತೆ?
ಸೋಲು ಗೆಲವಿಗೆ ಮೆಟ್ಟಿಲು!
ಬಿದ್ದವರಲ್ಲವೇ ಮರಳಿ ಏಳುವುದು!
ಬೀಳದಿದ್ದವನು ಎಂದೂ ಮೇಲೆದ್ದವನಲ್ಲ!
ಸಮರವೇ ಜೀವನದ ತಿರುಳು;
ಹೋರಾಟವೇ ಜೀವನದ ಚಿಹ್ನೆ.
ಆದರ್ಶ ಪ್ರಾಪ್ತಿಯೇ ಜೀವನ
ಪರಿಸಮಾಪ್ತಿ.
ಮಣ್ಣಿನಲ್ಲಿ ಬಿದ್ದು ಹೊರಳಿ
ಬದುಕುವುದಕ್ಕಿಂತಲೂ
ಬಾನಿನಲಿ ತೇಲಿ ಹಾರಿಸಾಯುವುದೇ
ಮೇಲು.

—ಕುವೆಂಪು

ಚಿಂತನೆಗೊಂದು ಸಂಗತಿ

ಮದ್ಯಪಾನ ನಿಷೇಧ

೨೦೧೭ ಫೆಬ್ರವರಿ ೨೧ ಒಂದು ವಿಶೇಷ ದಿನ. ರಾಜ್ಯದಲ್ಲಿ ಮದ್ಯಪಾನ ನಿಷೇಧ ಆಗಬೇಕೆಂದು ಆಗ್ರಹಿಸಿ ಅಂದು ಬೆಂಗಳೂರಿನಲ್ಲಿ ನಡೆದ ಹೋರಾಟದ ದಿನ. ಆ ಹೋರಾಟದ ಸೂತ್ರಧಾರಿಗಳು ಅಭಯ್, ಸ್ವರ್ಣ ಭಟ್, ನಿಲಯ್ಯ, ಶಿವಪ್ರಸನ್ನ. ಬಿಹಾರ್ ರಾಜ್ಯದ ತರುಣ ಅಭಯ್. ಕಳೆದ ಹಲವಾರು ವರ್ಷಗಳಿಂದ ಕರ್ನಾಟಕದಲ್ಲಿ ನೆಲೆಸಿದ್ದಾರೆ. ಇಲ್ಲಿಯ ಜನರ ಜೊತೆಗೆ ಚೆನ್ನಾಗಿ ಬೆರೆತಿದ್ದಾರೆ. ನಿರರ್ಗಳವಾಗಿ ಕನ್ನಡ ಮಾತನಾಡುತ್ತಾರೆ. ಇನ್‌ಪೋಸಿಸ್ ಕಂಪನಿಯಲ್ಲಿ ಕೆಲಸದಲ್ಲಿದ್ದವರು. ಸಮಾಜ ಸೇವಾ ಚಟುವಟಿಕೆಗಳಲ್ಲಿ ತೀವ್ರ ಆಸಕ್ತಿ ಇದ್ದುದರಿಂದ ಒಳ್ಳೆ ಸಂಪಾದನೆಯ ಕೆಲಸವನ್ನು ಬಿಟ್ಟು ಪೂರ್ಣಸಮಯದ ಸಾಮಾಜಿಕ ಹೋರಾಟಗಾರರಾಗಿ ತಮ್ಮನ್ನು ಬದಲಾಯಿಸಿಕೊಂಡಿದ್ದಾರೆ. ಹೋರಾಟಕ್ಕೆ ಅಭಯ್ ಎತ್ತಿಕೊಂಡ ವಿಷಯ ಮದ್ಯಪಾನ ನಿಷೇಧ! ಇದು ವ್ಯಕ್ತಿ ಹಂತದಲ್ಲಿಯೂ ಮತ್ತು ಸರ್ಕಾರದ ಹಂತದಲ್ಲಿಯೂ ಆಗಬೇಕೆಂಬುದು ಅಭಯ್ ಅವರ ವಿಚಾರ. ಅದಕ್ಕಾಗಿ ಜನರಲ್ಲಿರುವ ಕುಡುಕುತನವನ್ನು ಬಿಡಿಸಲು ಪ್ರಯತ್ನಿಸುವುದರೊಂದಿಗೆ ಸರ್ಕಾರವು ಕಾನೂನುಬದ್ಧವಾಗಿ ಮದ್ಯಪಾನವನ್ನು ಪೂರ್ಣ ನಿಷೇಧಿಸಬೇಕೆಂಬುದು ಅವರ ಗುರಿ. ಅದಕ್ಕಾಗಿ ಸಣ್ಣದಾಗಿ ಪ್ರಾರಂಭಿಸಿದ ಪ್ರಯತ್ನ ಇಂದು ಹೆಮ್ಮರವಾಗಿ ಬೆಳೆಯುತ್ತಿದೆ. ಅದರ ಸೂಚನೆ ಕಳೆದ ಫೆಬ್ರವರಿ ೨೧ ರಂದು ಬೆಂಗಳೂರಿನ ಶಾಂತಿನಗರಬಸ್ ನಿಲ್ದಾಣದಲ್ಲಿ ನಡೆದ ಪ್ರತಿಭಟನೆ ಸೂಚಿಸುವಂತಿತ್ತು. ಬಹುಸಂಖ್ಯಾತ ಮಹಿಳೆಯರೇ ಇದ್ದ ಪ್ರತಿಭಟನೆಯಲ್ಲಿ ಸುಮಾರು ೨೦೦ ಜನರು ಸೇರಿದ್ದರು. ಮಹಿಳೆಯರಲ್ಲಿ ಕೆಲವರು ತಮ್ಮೊಂದಿಗೆ ಮಕ್ಕಳನ್ನು ಕರೆದುಕೊಂಡು ಬಂದಿದ್ದರು. ಒಬ್ಬ ಮಹಿಳೆ ಬಳಿ ಒಂದೂಕಾಲುವರ್ಷದ ಹೆಣ್ಣು ಮಗುವಿತ್ತು. ಆ ಮಗುವಿನ ಹೆಸರು ಶ್ವೇತಾ ತಾಯಿ ದೂರದ ಬಾಗಲಕೋಟೆಯಿಂದ ಬಂದವರಾಗಿದ್ದರು. ಉತ್ತರ ಕರ್ನಾಟಕದ ಇತರ ಜಿಲ್ಲೆಗಳಿಂದಲೂ ಮಹಿಳೆಯರು ಬಂದಿದ್ದರು. ಬೆಂಗಳೂರಿನಲ್ಲಿರುವ ಎಕ್ಸೈಜ್ ಕಮೀಷನರ್ ಆಫೀಸಿನ ಎದುರಿನ ಪುಟ್‌ಪಾತ್ ಮೇಲೆ ಪ್ರತಿಭಟನಾಕಾರರು ಕುಳಿತು ಪ್ರತಿಭಟನೆ ನಡೆಸಿದರು. ಅವರು ತಮ್ಮ ಬೇಡಿಕೆಯನ್ನು ಬಹು ಮಾರ್ಮಿಕವಾದ ಘೋಷಣೆಯೊಂದಿಗೆ ಮಂಡಿಸುತ್ತಿದ್ದರು. “ನಿಮ್ಮಲ್ಲಿಯ ಗಾಂಧೀ ಚಿತ್ರ ನಮಗೆ ಕೊಡಿ, ಇಲ್ಲವೆ ಮದ್ಯಪಾನ ನಿಷೇಧಿಸಿ”. ಜನತೆಗೆ ಮದ್ಯ ಕುಡಿಸಿ ಹಣ ಸಂಪಾದನೆ ಮಾಡುವ ಸರ್ಕಾರಕ್ಕೆ ಮಹಾತ್ಮಾ ಗಾಂಧೀಯವರ ಚಿತ್ರ ಹಾಕಿಕೊಳ್ಳುವ ನೈತಿಕಹಕ್ಕು ಇಲ್ಲ. ಆ ಚಿತ್ರ ಸಲ್ಲಬೇಕಾದುದು ಮದ್ಯಪಾನ ನಿಷೇಧಿಸಬೇಕೆಂದು ಒತ್ತಾಯಿಸುತ್ತಿರುವ ಜನಕ್ಕೆ. ಇದೇ ವಿಷಯವನ್ನು ಇಟ್ಟುಕೊಂಡು ಈಗಾಗಲೇ ಹದಿನೆಂಟು ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆದಿದೆ. ಕೆಲ ದಿನಗಳ ಹಿಂದೆ ರಾಯಚೂರಿನಲ್ಲಿ ಮಹಿಳೆಯರ ದೊಡ್ಡ ಪ್ರತಿಭಟನೆ ನಡೆಯಿತು. ಅದರಲ್ಲಿ ಸುಮಾರು ನಲವತ್ತುಸಾವಿರ ಮಹಿಳೆಯರು ಸೇರಿದ್ದರು! ಗಾಂಧೀಜಿಯವರು ಕೊಟ್ಟಿದ್ದ “ಭಾರತ ಬಿಟ್ಟು ತೊಲಗಿ” ಎಂಬ ಘೋಷಣೆ ಮತ್ತು ದಂಡಿಯಾತ್ರೆ ನೆನಪಾಗುತ್ತದೆ. ಸರಳವಾದ ಆದರೆ ಅರ್ಥಪೂರ್ಣ ಈ ಘೋಷಣೆ ಮೂಲಕ ಪ್ರತಿಭಟನಾಕಾರರು ಜನರಿಗೆ ವಿಷಯ ತಿಳಿಸಿದ್ದು ತುಂಬ ಸಮಂಜಸವಾಗಿದೆ. “ಗಾಂಧೀ ಚಿತ್ರ ನಮಗೆ ಕೊಡಿ, ಇಲ್ಲವೇ ಮದ್ಯಪಾನ ನಿಷೇಧಿಸಿ” ಎಂಬ ಘೋಷಣೆ ಪ್ರಭಾವಕಾರಿಯಾಗಿದೆ. ಚಳುವಳಿಗೆ ಬಲಬರಲೆಂದು ಹಾರೈಸುತ್ತ ಎಲ್ಲರೂ ಈ ಜನಚಳುವಳಿಯಲ್ಲಿ ಸೇರಿಕೊಳ್ಳೋಣ.

ಇಸ್ರೊ ಮತ್ತು ನಾಸಾ ಅಗತ್ಯವೇ?

– ಸುರೇಂದ್ರ ಕೌಲಗಿ

ಫೆಬ್ರವರಿ ೧೫ ರಂದು ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ೧೦೪ ಉಪಗ್ರಹಗಳನ್ನು ಹಾರಿಸಿತು. ಈ ೧೦೪ ಉಪಗ್ರಹಗಳಲ್ಲಿ ೧೦೧ ವಿದೇಶಿ ಉಪಗ್ರಹಗಳು. ಮೂರು ಉಪಗ್ರಹಗಳು ಮಾತ್ರ ಭಾರತದಾಗಿದ್ದವು. ವಿದೇಶಿ ಉಪಗ್ರಹಗಳನ್ನು ಹಾರಿಸಿದ್ದರಿಂದ ಇಸ್ರೊ ಸಂಸ್ಥೆಗೆ ಕೋಟಿ ಮೌಲ್ಯಗಳಷ್ಟು ಹಣ ಸಂಪಾದನೆಯಾಗಿದೆ. ಆ ಮೂಲಕ ಭಾರತದ ವಿದೇಶಿ ವಿನಿಮಯದ ಮೊತ್ತ ಹೆಚ್ಚಾಯಿತು. ಇಸ್ರೊದ ಈ ಸಾಧನೆಯನ್ನು ಎಲ್ಲರೂ ಮೆಚ್ಚಿದ್ದಾರೆ. ಇಸ್ರೊ ಸಂಸ್ಥೆಗೆ ಹಾರ್ದಿಕವಾಗಿ ಅಭಿನಂದಿಸಿದ್ದಾರೆ. "ಅಂತರಾಷ್ಟ್ರೀಯ ವೈಜ್ಞಾನಿಕ ಸಂಶೋಧನೆಯಲ್ಲಿ ಭಾರತದ ಹೆಸರು ವಿಜೃಂಭಿಸಲು ಇಂಥ ಕಾರ್ಯಕ್ರಮಗಳು ಮತ್ತಷ್ಟುಬೇಕೆಂಬ ಅಭಿಪ್ರಾಯ ವ್ಯಕ್ತವಾಗಿದೆ".

ವಿಶೇಷ ಯಶಸ್ಸಿನ ಈ ಸಾಧನೆಯ ನಂತರ ಇಸ್ರೊ ಈ ವರ್ಷವೇ ಮಾರ್ಚ್ ಮತ್ತು ಏಪ್ರಿಲ್ ಮಾಹೆಗಳಲ್ಲಿ ಇನ್ನು ಎರಡು ಉಪಗ್ರಹಗಳನ್ನು ಹಾರಿಸಲು ಸಿದ್ಧವಾಗುತ್ತಿದೆ. ಇವುಗಳಲ್ಲಿ ಒಂದು ಭಾರತಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಇನ್ನೊಂದು ಸಾರ್ಕ ದೇಶಗಳ ಉಪಯೋಗಕ್ಕಾಗಿ, ಇದಲ್ಲದೆ ಎರಡನೇ ಬಾರಿ ಚಂದ್ರಯಾನದ ಯೋಜನೆಯನ್ನೂ ಇಸ್ರೊ ಇಟ್ಟುಕೊಂಡಿದೆ. ೨೦೧೮ ನೇ ಇಸವಿಯ ಪ್ರಾರಂಭದಲ್ಲಿ ಈ ಯೋಜನೆ ನೆರವೇರಬಹುದೆಂದು ಇಸ್ರೊ ಹೇಳಿದೆ. ಇಸ್ರೊದ ವಾಣಿಜ್ಯ ವಿಭಾಗ ಆಂಟ್ರಿಕ್ಸ್ ಕಾರ್ಪೋರೇಶನ್ (ನಿ) ವಿವಿಧ ಗ್ರಾಹಕ ದೇಶಗಳಿಂದ ೫೦೦ ರಿಂದ ೬೦೦ ಕೋಟಿ ಹಣವನ್ನು ಪಡೆದಿದೆ. ಕಾಲಕ್ರಮೇಣ ಇಸ್ರೊ ಆ ಗ್ರಾಹಕ ದೇಶಗಳಿಗಾಗಿ ಉಪಗ್ರಹಗಳನ್ನು ಹಾರಿಸುತ್ತಾ ಹೋಗುವುದು.

ಇಸ್ರೊ ಸಂಸ್ಥೆಯ ಪ್ರಾರಂಭ ೧೯೬೦ರ ದಶಕದಲ್ಲಿ ಆಯಿತು. ಉಪಗ್ರಹಗಳ ಉಡಾವಣೆಗೆ ಅದು ತನ್ನ ಸಾಮರ್ಥ್ಯವನ್ನು ಬಲಪಡಿಸಿಕೊಂಡಾದ ಮೇಲೆ ಅನೇಕ ಉಪಗ್ರಹಗಳನ್ನು ಹಾರಿಸಿದೆ. ಕಳೆದ ಫೆಬ್ರವರಿ ೧೫ ರ ಉಡಾವಣೆ ೩೮ನೇಯದಾಗಿದೆ.

ಅಮೇರಿಕ, ರಷ್ಯಾ, ಚೀನಾ ಮತ್ತು ಪಾಕಿಸ್ತಾನ ಕೂಡಾ ಅಂತರಿಕ್ಷಯಾನ ವಿಜ್ಞಾನ ಸಂಸ್ಥೆಗಳನ್ನು ಹೊಂದಿವೆ. ಅವು ತಮ್ಮದೇ ಆದ ಉದ್ದೇಶಗಳಿಗೆ ಉಪಗ್ರಹಗಳನ್ನು ಹಾರಿಸುತ್ತಿವೆ. ಬೇರೆ ಗ್ರಹಗಳಿಗೂ ಯಾನ ಮಾಡುವ ಸಿದ್ಧತೆ ಮಾಡಿಕೊಳ್ಳುತ್ತಿವೆ. ಅಂತರಿಕ್ಷದಲ್ಲಿ ವರ್ಷಗಟ್ಟಲೇ ಇದ್ದು ಪ್ರಯೋಗ ಮಾಡುವುದನ್ನು ಕೂಡ ಮಾಡುತ್ತಿವೆ. ಅಂತರಿಕ್ಷದಲ್ಲಿ ನಿಲ್ದಾಣಗಳನ್ನು ನಿರ್ಮಿಸುತ್ತಿವೆ. ಚಂದ್ರಲೋಕಕ್ಕೆ ಹೋಗಿ ಆಗಿದೆ. ಮಂಗಳಗ್ರಹ ತಲುಪಿಯಾಗಿದೆ. ಪುನಃ ಅಲ್ಲಿಗೆ ಹೋಗುವ ಪ್ರಯತ್ನ ನಡೆದಿದೆ.

ಕ್ರಮೇಣ ಶನಿಗ್ರಹಕ್ಕೂ ಹೋಗುವ ಮಹತ್ವಕಾಂಕ್ಷೆಯನ್ನು ಹೊಂದಿವೆ. ಮಂಗಳ ಗ್ರಹದಲ್ಲಿ ಮನೆ ಕಟ್ಟುವ ಯೋಜನೆಯನ್ನು ಅರಬ್ ದೇಶವೊಂದು ಮಾಡುತ್ತಿದೆ. ಬಾಹ್ಯಕಾಶ ವಿಜ್ಞಾನವನ್ನು ಎಲ್ಲ ದೇಶಗಳು ವಾಣಿಜ್ಯ ಲಾಭ ಮತ್ತು ಸಮರೋದ್ಯೋಗಕ್ಕಾಗಿ ಉಪಯೋಗಿಸಿಕೊಳ್ಳುತ್ತಿವೆ. ಅಮೇರಿಕ ಮತ್ತು ರಷ್ಯಾ ಅಂತರಿಕ್ಷ ವಿಜ್ಞಾನದಲ್ಲಿ ತೊಡಗಲು ಅವುಗಳ ಮಧ್ಯೆಯಿರುವ ಶೀತಲ ಯುದ್ಧ ಕಾರಣವಾಗಿದೆ. ಅಂತರಿಕ್ಷ ವಿಜ್ಞಾನ ಕ್ಷೇತ್ರದಲ್ಲಿ ದಾಪುಗಾಲು ಹಾಕಲು ಚೀನಾ ಪ್ರಯತ್ನಿಸುತ್ತಿರುವುದಕ್ಕೆ ಎಲ್ಲ ದೃಷ್ಟಿಯಿಂದಲೂ ತಾನೊಂದು ಬಲಾಢ್ಯ ಮತ್ತು ಪ್ರಶ್ನಾತೀತ ರಾಷ್ಟ್ರವಾಗಬೇಕೆಂಬ ಹೆಬ್ಬಯಕೆಯೇ ಆಗಿದೆ.

ಹೀಗೆ ಎಲ್ಲ ದೇಶಗಳ ಅಂತರಿಕ್ಷ ವಿಜ್ಞಾನದ ಸಾಧನೆಯಲ್ಲಿ ಆಯಾ ದೇಶದ ಸ್ವಾರ್ಥವಿದೆಯೇ ಹೊರತು ಭೂಗ್ರಹದ ಮೇಲಿರುವ ಮಾನವ ಕುಲದ ಮತ್ತು ಇತರ ಪ್ರಾಣಿ-ಸಂಕುಲದ ಹಾಗು ಪ್ರಕೃತಿಯ ಸಂರಕ್ಷಣೆಯ ಹಿತಚಿಂತನೆ ಎಳ್ಳಷ್ಟೂ ಇಲ್ಲ.

ಅಂತರಿಕ್ಷ ವಿಜ್ಞಾನದ ಕ್ಷೇತ್ರದಲ್ಲಿಯ ಸಂಶೋಧನೆಗಳಿಂದ ಜಾಗತಿಕ ಪ್ರಕೃತಿ ನಾಶವಾಗುತ್ತಿದೆ. ಹವಾಮಾನದ ವೈಪರೀತ್ಯ ಉಂಟಾಗುತ್ತಿದೆ. ಈ ಸಂಶೋಧನೆಗಳ ಮತ್ತು ತಂತ್ರಜ್ಞಾನದ ಕಾರಣದಿಂದಾಗಿ ಪ್ರಕೃತಿಯ ಸಹಜ ವಿನಾಶ ಪ್ರಮಾಣಕ್ಕಿಂತ ೧೭೦ ರಷ್ಟು ಪ್ರಮಾಣದಲ್ಲಿ ಮಾನವನಿಂದಲೇ ಆಗುತ್ತಿದೆ. ಈ ವೈಜ್ಞಾನಿಕ ಕ್ಷೇತ್ರಕ್ಕಾಗಿ ಎಲ್ಲ ದೇಶಗಳು ಖರ್ಚು ಮಾಡುತ್ತಿರುವ ಮೊತ್ತವನ್ನು ಲೆಕ್ಕ ಹಾಕಿದರೆ ತಲೆ ತಿರುಗುತ್ತದೆ. ಉದಾಹರಣೆಗೆ ಉಪಗ್ರಹಗಳ ಉಡಾವಣೆಗೆ ಇಸ್ರೊ ಹಾರಿಸುವ ಪ್ರತಿ ವಾಹನಕ್ಕೆ ೨೦೦ ಕೋಟಿಗಳಿಗಿಂತಲೂ ಹೆಚ್ಚು ಹಣ ಖರ್ಚಾಗುತ್ತದೆ. ಉಪಗ್ರಹಗಳನ್ನು ಹಾರಿಸಿದ ನಂತರ ಆ ವಾಹನ ಆಕಾಶದಲ್ಲಿಯೇ ಸುಟ್ಟು ಹೋಗುತ್ತದೆ. ಮತ್ತೆ ಉಪಗ್ರಹಗಳನ್ನು ಹಾರಿಸಬೇಕೆಂದರೆ ಪುನಃ ಅಷ್ಟೇ ಅಥವಾ ಅದಕ್ಕಿಂತ ಹೆಚ್ಚು ಹಣ ಖರ್ಚುಮಾಡಿ ಹೊಸ ವಾಹನ ತಯಾರಿಸಬೇಕಾಗುತ್ತದೆ. ಇದುವರೆಗೆ ೩೮ ಉಡಾವಣೇಗಳಾಗಿವೆ. ಪ್ರತಿಯೊಂದು ಉಡಾವಣೆಯ ವಾಹನಕ್ಕೆ ೫೦೦ ಕೋಟಿ ರೂಪಾಯಿ ಖರ್ಚಾಗಿದ್ದರೆ ಇದುವರೆಗೆ ಎಷ್ಟೊಂದು ದೊಡ್ಡ ಮೊತ್ತ ಉಪಗ್ರಹಗಳ ಉಡಾವಣೆಗಾಗಿ ಖರ್ಚಾಗಿದೆ ಎಂದು ಲೆಕ್ಕಹಾಕಬಹುದು. ಇದುವರೆಗಿನ ೩೭ ಉಪಗ್ರಹಗಳ ಲಾಭಾಲಾಭದ ಸಾಮಾಜಿಕ ಲೆಕ್ಕಪರಿಶೋಧನೆ (ಸೋಸಿಯಲ್ ಆಡಿಟ್) ನಡೆಯಬೇಕಾದುದು ಅಗತ್ಯವಾಗಿದೆ. ಇಸ್ರೊ ಸಂಸ್ಥೆಯಲ್ಲಿ ೧೫ ರಿಂದ ೧೮ ಸಾವಿರ ವಿಜ್ಞಾನಿಗಳು ಕೆಲಸ ಮಾಡುತ್ತಾರೆ. ಇವರಲ್ಲದೆ ಬೇರೆ ಪೂರಕ ದೊಡ್ಡ ಸಿಬ್ಬಂದಿಯೇ ಇದೆ. ಇವರೆಲ್ಲರ ನಿರ್ವಹಣೆಯ ವಾರ್ಷಿಕ ಖರ್ಚನ್ನು ಲೆಕ್ಕಹಾಕಿದರೆ ಇಸ್ರೊದ ಅಂತರಿಕ್ಷ ಸಂಶೋಧನ ವಿಜ್ಞಾನಕ್ಕೆ ಎಷ್ಟು ಹಣ ಖರ್ಚಾಗುತ್ತಿದೆಯೆಂಬುದನ್ನು ಊಹಿಸಿಕೊಳ್ಳಬಹುದು. ಇಷ್ಟು ದೊಡ್ಡ ಪ್ರಮಾಣದ ಖರ್ಚು ಇನ್ನು ಮುಂದೆಯೂ ಆಗುತ್ತಲೇ ಹೋಗುತ್ತದೆ.

ಭಾರತ ದೇಶ ಬಡದೇಶವೆಂದು ಹೇಳಲಾಗುತ್ತದೆ. ಇಷ್ಟೆಲ್ಲಾ ಖರ್ಚಾದ ನಂತರ ಜನರಿಗೆ ಏನು ಲಾಭವಾಗಿದೆ ಎಂಬುದು ಯೋಚಿಸುವ ಸಂಗತಿಯಾಗಿದೆ. ಇಂಥ ಬಡದೇಶವೊಂದು ಇಸ್ರೋದಂಥ ಸಂಸ್ಥೆಯನ್ನು ಇಟ್ಟುಕೊಳ್ಳಬಹುದೇ ಎಂದು ಪ್ರಶ್ನಿಸಿಕೊಳ್ಳಬೇಕಿದೆ. ವ್ಯಯವಾಗುತ್ತಿರುವ ಹಣಕ್ಕೂ ಜನರಿಗೆ ಆಗುತ್ತಿರುವ ಅನುಕೂಲತೆಗಳ ಪ್ರಮಾಣಕ್ಕೂ ಹೋಲಿಸಿದರೆ ಈ ವಿಷಯದಲ್ಲಿ ತುಂಬ ನಿರಾಶೆಯಾಗುತ್ತದೆ. ಇದಕ್ಕೊಂದು ಉದಾಹರಣೆಯಾಗಿ ೨೦೦೮ ರಲ್ಲಿ ಇಸ್ರೋ ಕೈಗೊಂಡಿದ್ದ ಚಂದ್ರಯಾನ_೧ ಯೋಜನೆಯನ್ನು ನೋಡಬಹುದು. ಆ ಯಾನದ ಉದ್ದೇಶ ಈ ಕೆಳಗೆ ಕಾಣಿಸಿದಂತೆ ಇದ್ದವು;

೧ ಚಂದ್ರನ ಪರಿಸರವನ್ನು ಅಧ್ಯಯನ ಮಾಡುವುದು;

೨. ಸಂಪೂರ್ಣ ಚಂದ್ರನನ್ನು ದೃಶ್ಯದಲ್ಲಿ ಸೆರೆಹಿಡಿಯುವುದು;

೩. ಚಂದ್ರನಲ್ಲಿರುವ ಬೆಟ್ಟಗುಡ್ಡಗಳ ಕುರಿತು ಸಮಗ್ರ ಅಧ್ಯಯನ ಮಾಡುವುದು;

೪. ಚಂದ್ರನಲ್ಲಿ ನೀರಿನ ಅಂಶ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಪತ್ತೆ ಮಾಡುವುದು;

೫. ಚಂದ್ರನ ಗರುತ್ವಾಕರ್ಷಣಾ ಪ್ರಮಾಣ ಅಳೆಯುವುದು ಮತ್ತು ಉಪಯುಕ್ತತೆ ತಿಳಿಯುವುದು;

ಚಂದ್ರಯಾನ–೧ ಯೋಜನೆಗೆ ೩೮೬ ಕೋಟಿ ರೂಪಾಯಿಗಳು ಖರ್ಚಾದವು. ಆದರೆ ಚಂದ್ರಯಾನದ ಉದ್ದೇಶಗಳು ಎಷ್ಟರ ಮಟ್ಟಿಗೆ ನೆರವೇರಿದೆ ಎಂಬುದು ಗೊತ್ತಾಗಿಲ್ಲ. ಒಂದು ವೇಳೆ ನೆರವೇರಿದ್ದರೆ ಅವುಗಳಿಂದ ಭೂಮಿಯ ಮೇಲಿರುವ ಜನಕೋಟಿಗೆ ಏನು ಲಾಭವಾಗಿದೆ ಮತ್ತು ಅವರ ಜೀವನದಲ್ಲಿ ನೆಮ್ಮದಿ ತರಲು ಮತ್ತು ಭೂಮಿಯ ಮೇಲಿನ ಪರಿಸರ ನಾಶದ ತಡೆಗೆ ಹೀಗೆ ಸಹಾಯಕವಾಗಿದೆ ಎಂಬುದೂ ಗೊತ್ತಾಗಿಲ್ಲ. ಚಂದ್ರನ ಪರಿಸರವನ್ನು ಅಧ್ಯಯನ ಮಾಡುವುದೊಂದು ಚಂದ್ರಯಾನದ ಉದ್ದೇಶವಾಗಿತ್ತು. ೩೮,೦೦೦ ಕಿ.ಲೋ.ಮೀಟರ್‌ಗಿಂತಲೂ ದೂರವಿರುವ ಚಂದ್ರನಲ್ಲಿಯ ಪರಿಸರದ ಅಧ್ಯಯನ ಭೂಮಿಯ ಮೇಲಿನ ಪರಿಸರದ ಉಳಿಯುವಿಕೆಗಾಗಿ ಯಾವ ರೀತಿ ನೇರವಾಗಿ ನೆರವಾಗುತ್ತದೆಂಬುದು ಸಾಮಾನ್ಯ ಜನರಿಗೆ ಗೊತ್ತಾಗಲಿಕ್ಕಿಲ್ಲ. ಭೂಮಿಯ ಮೇಲಿರುವ ಪರಿಸರ ವಿಜ್ಞಾನಿಗಳಿಗೆ ಗೊತ್ತಾಗಬಹುದು. ಒಂದು ವೇಳೆ ಗೊತ್ತಾಗಿ ಉಪಯೋಗವಾಗುವುದಾಗಿದ್ದರೆ ಇಂದು ಭೂಮಿಯ ಮೇಲಿನ ಪರಿಸರ ಇಷ್ಟೊಂದು ಕೆಡುತ್ತಿರಲಿಲ್ಲ. ಅಲ್ಲಿಯ ಪರ್ವತಗಳ ಎತ್ತರ ತಿಳಿದುಕೊಳ್ಳುವ ಪ್ರಯತ್ನದಲ್ಲಿರುವಾಗಲೇ ಭೂಮಿಯ ಮೇಲಿನ ಬಹು ಮುಖ್ಯ ಪ್ರಕೃತಿಯ ತಾಣಗಳಾದ ಹಿಮಾಲಯ, ಪಶ್ಚಿಮ ಘಟ್ಟಗಳಂಥ ಪ್ರದೇಶಗಳು ನೆಲಸಮವಾಗುತ್ತಿವೆ. ಚಂದ್ರನಲ್ಲಿ ನೀರು ಇದೆಯೇ ಇಲ್ಲವೇ ಎಂಬುದನ್ನು ತಿಳಿಯುವುದು ಇಸ್ರೋದ ವಿಜ್ಞಾನಿಗಳಿಗೆ ಮುಖ್ಯವಾಗಿರುವ ಸಮಯದಲ್ಲಿಯೇ ಭೂಮಿಯ ಮೇಲಿನ

ಹಾಗೂ ಭೂ ಒಳಗಿನ ನೀರಿನ ಸ್ರೋತ್ರಗಳು ಒಣಗುತ್ತಿವೆ. ಹೀಗೆ ಚಂದ್ರಯಾನದ-೧ ಯೋಜನೆ ಕೈಗೊಂಡು ಎಂಟು ವರ್ಷಗಳಾದ ಬಳಿಕವೂ ಭೂಮಿಯ ಮೇಲಿನ ಪರಿಸ್ಥಿತಿ ಸುಧಾರಿಸುವ ಬದಲು ಅಧೋಗತಿಗೆ ಹೋಗುತ್ತಿದೆಯೆಲ್ಲ? ಚಂದ್ರಯಾನಕ್ಕೆ ಖರ್ಚು ಮಾಡಿದ ೩೮೬ ಕೋಟಿ ಹಣವನ್ನು ಭೂಮಿಯ ಮೇಲೆ ಅಸಂಖ್ಯಾತ ಸಣ್ಣ ಪ್ರಮಾಣದ ಕೆರೆಗಳನ್ನು ಮತ್ತು ಅಣೆಕಟ್ಟುಗಳನ್ನು ನಿರ್ಮಿಸಿ ಮಳೆಯ ನೀರನ್ನು ತಡೆಯಬಹುದಾಗಿತ್ತಲ್ಲವೇ? ಇಸ್ರೋದವರೇ ಪ್ರಕಟಿಸಿರುವ ಮಾಹಿತಿಯ ಪ್ರಕಾರ ಉಪಗ್ರಹಗಳನ್ನು ತಯಾರಿಸಲು ದಶಕೋಟಿ ರೂಪಾಯಿಗಳು ಬೇಕಾಗುತ್ತವೆ. ಅವುಗಳನ್ನು ಹಾರಿಸುವ ವಾಹನವನ್ನು ತಯಾರಿಸಲು ಶತಕೋಟಿ ಹಣ ಬೇಕಾಗುತ್ತದೆ. ಅಂತರಿಕ್ಷ ವಿಜ್ಞಾನ ಕ್ಷೇತ್ರ ಅಂತ್ಯವಿಲ್ಲದ್ದು. ಅಂತ್ಯವಿಲ್ಲದ ವಿಜ್ಞಾನದ ಹಿಂದೆ ಯಾವ ಗೊತ್ತಿಗುರಿ ಉದ್ದೇಶವಿಲ್ಲದೆ ಹೋಗುವುದು ವೈಜ್ಞಾನಿಕವೇ ಎಂಬುದನ್ನು ವಿಜ್ಞಾನಿಗಳೇ ಸ್ವತಃ ಯೋಚನೆ ಮಾಡಬೇಕು. ಅಂತರಿಕ್ಷಯಾನ ಮತ್ತು ಉಪಗ್ರಹಗಳ ಉಡಾವಣೆಗೆ ಸಂಬಂಧಿಸಿದ ವಿಜ್ಞಾನದ ಉತ್ಪಾದನೆಯಾದ ತಂತ್ರಜ್ಞಾನವನ್ನು ಭೂಮಿಯ ಮೇಲಿನ ಸಮಾಜ ಉಪಯೋಗಿಸಿಕೊಳ್ಳುತ್ತದೆ. ಆ ತಂತ್ರಜ್ಞಾನದಿಂದ ರಚನೆಯಾಗುವ ವಿವಿಧ ಬಗೆಯ ಸಾಧನ ಸಾಮಾಗ್ರಿಗಳು ಮನುಷ್ಯನನ್ನು ಪರಾವಲಂಬಿ ಮಾಡಿವೆ. ಶರೀರ ಶ್ರಮವನ್ನು ಮರೆಸಿವೆ ಮತ್ತು ದೈನಂದಿನ ಬುದ್ಧಿಸಾಮರ್ಥ್ಯವನ್ನೂ ಕುಂಠಿತಗೊಳಿಸಿದೆ. ಎಲ್ಲಕ್ಕಿಂತ ಹೆಚ್ಚಾಗಿ ಸಮಾಜದಲ್ಲಿ ಹಿಂಸೆಯನ್ನು ಒಂದು ಮೌಲ್ಯವನ್ನಾಗಿ ಮಾಡಿದೆ ಮತ್ತು ಹಿಂಸಾಧಾರಿತ ಅರ್ಥವ್ಯವಸ್ಥೆಗೆ ದಾರಿ ಮಾಡಿಕೊಡುತ್ತಿದೆ. ಅದರ ಫಲವಾಗಿ ಜೀವಧಾರಣೆಗೆ ಮುಖ್ಯವಾಗಿಬೇಕಾದ ನೈತಿಕ ಮೌಲ್ಯಗಳು ತಲೆಮರೆಸಿಕೊಂಡು ಹೋಗುತ್ತಿವೆ. ಅವುಗಳ ಸ್ಥಾನದಲ್ಲಿ ಹಣ ಮತ್ತು ಭೌತಿಕ ಸುಖ ವಿಜೃಂಭಿಸುತ್ತಿವೆ.

ಭಾರತೀಯ ಚಿಂತನಾಕಾರರು ವಿದ್ಯೆಯನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿದ್ದಾರೆ. ಒಂದು ಅವಿದ್ಯೆ, ಇನ್ನೊಂದು ವಿದ್ಯೆ. ಅನಧಿಕೃತವಾಗಿರುವ ಅನಂತ ಜ್ಞಾನವನ್ನು ಪಡೆಯದಿರುವುದು ಅವಿದ್ಯೆಯಂತಲೂ, ವಿದ್ಯೆಯೆಂದರೆ ಅಧಿಕೃತ ವಿಶಿಷ್ಟ ಜ್ಞಾನದ ಲಾಭ ಪಡೆಯುವದೆಂತಲೂ ಹೇಳಿದ್ದಾರೆ. ಅವಿದ್ಯೆಯಲ್ಲಿ ಯಾರು ಮುಳುಗಿದ್ದಾರೋ ಅವರಂತೂ ಘೋರ ಅಂದಕಾರಕ್ಕೆ ಹೋದಂತೆ, ಇನ್ನು ಯಾರು ವಿದ್ಯೆಯಲ್ಲಿ ತನ್ಮಯರಾಗಿದ್ದಾರೋ ಅವರು ಇನ್ನೂ ಹೆಚ್ಚು ಘೋರ ಅಂಧಕಾರದಲ್ಲಿ ಹೋದಂತೆ ಎಂಬುದಾಗಿ ಹೇಳಲಾಗಿದೆ. ಈ ಮಾತನ್ನು ಗಮನದಲ್ಲಿರಿಸಿಕೊಂಡು ಅರ್ಥೈಸಿದರೆ ಇಂದಿನ ವಿಜ್ಞಾನ ಮತ್ತು ತಂತ್ರಜ್ಞಾನಗಳು ಅವಿದ್ಯೆ ಮತ್ತು ವಿದ್ಯೆ ಎನಿಸಿಕೊಳ್ಳುತ್ತವೆ. ಆದ್ದರಿಂದಲೇ ನಾಸಾ ಮತ್ತು ಇಸ್ರೋದಂಥ ಅಂತರಿಕ್ಷ ವಿಜ್ಞಾನದಿಂದ ತೃಣದಷ್ಟೂ ನೆಮ್ಮದಿ ಉಂಟಾಗಿಲ್ಲ. ಭೌತಿಕ ಸುಖಗಳು ಹೆಚ್ಚಾಗಿರಬಹುದೇ ಹೊರತು ಮನುಷ್ಯನ ಆಂತರಿಕ ಜಗತ್ತಿನಲ್ಲಿ ಸುಖವಿಲ್ಲ. ಇದುವರೆಗೆ ನೂರಾರು ಉಪಗ್ರಹಗಳು ಆಕಾಶದಲ್ಲಿ ಸುತ್ತುತ್ತಿವೆ. ಒಂದೊಂದು ಉಪಗ್ರಹವೂ ಒಂದೊಂದು ಉದ್ದೇಶಕ್ಕಾಗಿ

ಇದೆ. ಅವೆಲ್ಲವುಗಳ ಉದ್ದೇಶಗಳನ್ನು ಕ್ರೋಢೀಕರಿಸಿ ನೋಡಿದಾಗ ಅವು ಹಿಂಸಾಯುಕ್ತ ಅರ್ಥವ್ಯವಸ್ಥೆಗೆ ಕಾರಣವಾಗುವುದೆಂದು ಗೊತ್ತಾಗುತ್ತದೆ. ಅವುಗಳ ಗುರಿ ಸಮರ್ಥನೀಯದಿಲ್ಲದಿರುವಾಗ ಉಪಗ್ರಹಗಳ ಮತ್ತು ಗ್ರಹಯಾನಗಳ ಮೂಲ ಸಂಸ್ಥೆ ಇಸ್ರೋ ಮತ್ತು ನಾಸಾಗಳ ಬಹು ದುಬಾರಿ ಕಾರ್ಯಚರಣೆ ಅಗತ್ಯವೇ ಎಂಬ ಪ್ರಶ್ನೆ ತಿಳುವಳಿಕೆಯಿರುವ ಎಂಥ ಸಾಮಾನ್ಯನಿಗೂ ಹುಟ್ಟುತ್ತದೆ. ಬಿಲಿಯನ್ ಗಟ್ಟಲೆ ಹಣ ಖರ್ಚು ಮಾಡಿ ತಾವು ಅದ್ಭುತ ಪವಾಡವನ್ನು ಮಾಡುತ್ತಿದ್ದೇವೆ ಎಂಬ ಭ್ರಮೆಯಲ್ಲಿ ಇಸ್ರೋ ಮತ್ತು ನಾಸಾ ಇವೆ. ಈ ಭ್ರಮೆಯಿಂದ ಆದಷ್ಟು ಬೇಗ ನಿರಸನಗೊಳ್ಳಬೇಕಾದುದು ಅಗತ್ಯವಾಗಿದೆ. ಬಾಹ್ಯ ಜಗತ್ತಿನ ಶೋಧನೆಯಲ್ಲಿ ತೊಡಗಿರುವ ಇಸ್ರೋ ಮತ್ತು ನಾಸಾದಂಥ ಸಂಸ್ಥೆಗಳಲ್ಲಿಯ ವಿಜ್ಞಾನಿಗಳಿಗೆ ಸವಾಲು ಎಸೆಯುವ ಮಾದರಿಯಲ್ಲಿ ಕುವೆಂಪುರವರ ಈ ಮಾತುಗಳಿವೆ:-

"ನಿನ್ನ ಕಾಲಡಿಯಲ್ಲಿ ನೋಡಿದರೆ ಅಲ್ಲಿ ಬೆಳೆದು ನಳನಳಿಸುವೆಳವುಲ್ಲು ಬಹುಕೋಟಿ ಯೋಜನಗಳಾಚೆಯಿಹ ನೀಹಾರಿಕೆಗೂ ಕಡಮೆಯ ಪವಾಡವಲ್ಲ!

ನಿನ್ನೊಂದು ಕೈಬೆರಳ ಕುಣಿಕೆಯ ರಚನೆ ರವಿಯ ಸುತ್ತಲೂ ಸುತ್ತುತ್ತಿಹ ಗ್ರಹಗಳ ಚಲನೆಗಿಂತಲೇನೂ ಕೀಳಾದ ಪವಾಡವಲ್ಲ! ಒಂದಿರುವೆಯ ಮುಂದೆ ಲಕ್ಷ ತಾರ್ತಿಕರ ವಾದಹೊಲ್ಲ".

ರೈಲು ಹೋಗುವಾಗ ತನ್ನ ಕಂಬಿ ತಪ್ಪದಂತೆ ಮಾಡಲು, ವಿಮಾನ ನಿಲ್ದಾಣದಲ್ಲಿ ವಿಮಾನಗಳ ಡಿಕ್ಕಿಯನ್ನು ತಪ್ಪಿಸಲು ಮತ್ತು ಮನೆ ಮುಗ್ಗಟ್ಟುಗಳಲ್ಲಿ, ರೈಲು-ಬಸ್ಸುಗಳಲ್ಲಿ ಶಾರ್ಟ್‌ಸರ್ಕಿಟ್ ಆಗುವುದನ್ನು ತಪ್ಪಿಸಲು ಇದು ವರೆಗೂ ಸಾಧ್ಯವಾಗದಿರುವಾಗ ಇಸ್ರೋ ಮತ್ತು ನಾಸಾಗಳಿಂದೇನು ಪ್ರಯೋಜನ? "ಅನಾಹುತಗಳಿಗೆಲ್ಲ ಮಾನವನು ಕಾರಣನೇ ಹೊರೆತು ವಿಜ್ಞಾನ ಮತ್ತು ತಂತ್ರಜ್ಞಾನ ಕಾರಣವಲ್ಲ" ಎಂಬ ವಾದವನ್ನು ಎಷ್ಟು ಕಾಲ ಸಹಿಸಿಕೊಳ್ಳಬೇಕು? ಅವುಗಳನ್ನು ಸದುಪಯೋಗ ಪಡಿಸಿಕೊಳ್ಳುವ ಮನುಷ್ಯನ ಚಿತ್ತ ನಿರ್ಮಾಣ ಕೆಲಸದ ಬಗ್ಗೆಯೂ ವಿಜ್ಞಾನಿಗಳು ಯೋಚನೆ ಮಾಡಬೇಡವೇ?

ಒಟ್ಟಿನಲ್ಲಿ ಇಸ್ರೋ ಮತ್ತು ನಾಸಾದಂಥ ಸಂಸ್ಥೆಗಳು ಅಗತ್ಯವೇ ಎಂಬ ಬಗ್ಗೆ ಜಾಗತಿಕ ಮಟ್ಟದಲ್ಲಿ, ಮುಖ್ಯವಾಗಿ ಭಾರತದ ಮಟ್ಟದಲ್ಲಿ, ಸಾರ್ವಜನಿಕ ಚರ್ಚೆಯಾಗಬೇಕಾದ ಸಮಯ ಬಂದಿದೆ. ಈ ಸಂದರ್ಭದಲ್ಲಿ ಗಾಂಧೀಜಿಯವರ ಎರಡು ಮಾತುಗಳನ್ನು ಹೇಳಬೇಕಾಗುತ್ತದೆ. ಮೊದಲನೆಯದು, "ವೈಜ್ಞಾನಿಕ ಸತ್ಯ ಮತ್ತು ಶೋಧನೆಗಳು ಮೊಟ್ಟ ಮೊದಲು ದುರಾಸೆಯ ಸಾಧನಗಳಾಗುವುದನ್ನು ಬಿಡಬೇಕು" ಎರಡನೆಯದು, "ಸಂಶೋಧನೆಗೆ ನನ್ನ ವಿರೋಧವಿಲ್ಲ, ಸಂಶೋಧನೆಯ ಹುಚ್ಚಿಗೆ ನನ್ನ ವಿರೋಧವಿದೆ".

●

ನಕಲಿ ಖಾದಿ ಮತ್ತು ನಿಜ ಮೋದಿ

–ಪಾಂಡುರಂಗ ಹೆಗಡೆ

(ಸಾಮಾನ್ಯ ಪ್ರಚಾರಕನಾಗಿ ಕೆಲಸ ಮಾಡಿ ಪ್ರಧಾನ ಮಂತ್ರಿಯಾದ ಮೋದಿಯವರು ತಮ್ಮ ಕುಶಲತೆಯನ್ನು ಖಾದಿಯ ಉಳಿಯುವಿಕೆಗಾಗಿ ಉಪಯೋಗಿಸಬೇಕು.)

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಕ್ಯಾಲೆಂಡರ್ ಮತ್ತು ದಿನಚರಿಗಳಲ್ಲಿ ಚರಕದ ಮೇಲೆ ನೂಲು ತೆಗೆಯುತ್ತಿರುವ ಮಹಾತ್ಮ ಗಾಂಧೀ ಚಿತ್ರದ ಬದಲಾಗಿ ನರೇಂದ್ರ ಮೋದಿಯವರ ಚಿತ್ರವನ್ನು ಹಾಕಿದ್ದಕ್ಕಾಗಿ ಹೊಸ ವಿವಾದ ಉಂಟಾಗಿದೆ. ಪ್ರಧಾನ ಮಂತ್ರಿಯವರು ತಮ್ಮ ಮನದಾಳದ ಮಾತಿನಲ್ಲಿ ಮತ್ತು ಇತರ ವೇದಿಕೆಗಳ ಮೇಲೆ ಸತತವಾಗಿ ಮಾಡಿದ ಖಾದಿ ಪ್ರಚಾರದ ಕಾರಣದಿಂದಾಗಿ ಶೇಕಡ ೨೯ ರಷ್ಟು ಖಾದಿ ಮಾರಾಟ ಹೆಚ್ಚಾಗಿ ೨೦೧೫–೧೬ ನೇ ಸಾಲಿನಲ್ಲಿ ಖಾದಿಯ ಒಟ್ಟು ಮಾರಾಟ ೧,೫೧೦ ಕೋಟಿಗೆ ಏರಿದೆ ಎಂಬುದಾಗಿ ಹೇಳಲಾಗುತ್ತಿದೆ.

೨೦೧೮ ರ ವೇಳೆಗೆ ಖಾದಿಯ ಮಾರಾಟ ಐದು ಸಾವಿರ ಕೋಟಿ ಆಗಬೇಕೆಂದು ಖಾದಿ ಆಯೋಗ ಗುರಿಯನ್ನು ಇಟ್ಟುಕೊಂಡಿದೆ. ಪ್ರಧಾನ ಮಂತ್ರಿಯವರು ಖಾದಿಯ ಸಂಕೇತರಾಗಿರುವುದರಿಂದ ನಶಿಸುತ್ತಿರುವ ಕುಟೀರೋದ್ಯೋಗವನ್ನು ಲಾಭದಾಯಕ ಉದ್ಯಮವನ್ನಾಗಿ ಮಾಡಬಹುದೆಂದು ಖಾದಿ ಆಯೋಗ ನಂಬುತ್ತದೆ.

ವಿವಾದ ತೀವ್ರವಾದಾಗ ಪ್ರಧಾನ ಮಂತ್ರಿಯವರ ಕಛೇರಿ ಹೇಳಿದ್ದೇನೆಂದರೆ "ವಿವಾದವು ಅನಗತ್ಯ. ಏಕೆಂದರೆ ಕ್ಯಾಲೆಂಡರ್‌ಗಳ ಮೇಲಾಗಲಿ, ದಿನಚರಿಗಳಲ್ಲಾಗಲಿ, ಚಿತ್ರಗಳನ್ನು ಮುದ್ರಿಸುವ ಬಗ್ಗೆ ಯಾವುದೇ ಕಟ್ಟುನಿಟ್ಟಾದ ನಿಯಮವಿಲ್ಲ". ನಂತರ ಟೀಕೆಗಳಿಗೆ ಬಗ್ಗಿದ ಪ್ರಧಾನಿಯವರ ಕಛೇರಿ ಹೇಳಿದ್ದೆನೆಂದರೆ, ಖಾದಿಆಯೋಗ ಮೋದಿಯವರ ಚಿತ್ರವನ್ನು ಬಳಸಿಕೊಳ್ಳಲು ಅವರ ಅನುಮತಿ ಪಡೆದಿಲ್ಲ!

ಕ್ಯಾಲೆಂಡರ್ ಮತ್ತು ಡೈರಿಗಳ ಮೇಲೆ ಕೇವಲ ಮಹಾತ್ಮ ಗಾಂಧೀಯವರ ಚಿತ್ರವನ್ನು ಪ್ರಕಟಿಸಬೇಕೆಂಬ ನಿಯಮವಾಗಲಿ ಅಥವಾ ಪರಂಪರೆಯಾಗಲಿ ಇಲ್ಲವೆಂದು ಆಯೋಗದ ಛೇರ್ಮನ್‌ರಾದ ವಿ.ಕೆ. ಸೆಕ್ಸೆನಾ ಹೇಳಿ ಖಾದಿ ಆಯೋಗದ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ.

ಆದರೆ ಎಲ್ಲ ರಾಜಕೀಯ ಪಕ್ಷಗಳ ವಿರೋಧದಿಂದ ಸಾಬೀತಾದುದು ಏನೆಂದರೆ "ರಾಷ್ಟ್ರಪಿತನ ಸ್ಥಾನವನ್ನು ಬದಲಾಯಿಸಲು ಸಾಧ್ಯವೇ ಇಲ್ಲ". ಖಾದಿ ಮತ್ತು ಗಾಂಧೀ ನಮ್ಮ ಇತಿಹಾಸ, ಸ್ವಾವಲಂಬನೆ ಮತ್ತು ಹೋರಾಟದ ಸಂಕೇತ. ಗಾಂಧೀಯವರ ಚಿತ್ರವನ್ನು ತೆಗೆದು ಹಾಕಿರುವುದು "ಧಾರ್ಮಿಕ ಪಾಪ" ಎಂದು ಕಾಂಗ್ರೆಸ್ ಹೇಳಿದೆ.

ದುರ್ದೈವದ ಸಂಗತಿ ಏನೆಂದರೆ ರಾಜಕೀಯ ಪಕ್ಷಗಳು ತಾವು ಎಷ್ಟು ದೇಶಾಭಿಮಾನಿಗಳೆಂಬುದನ್ನು ತೋರಿಸಲೂ ಮತ್ತು ಓರ್ವ ಚುನಾಯಿತ ಪ್ರತಿನಿಧಿಯಾಗಿ ಗಾಂಧೀಯವರ ಸ್ಥಾನವನ್ನು ಹೇಗೆ ದುರಪಯೋಗ ಪಡಿಸಿಕೊಳ್ಳುತ್ತಾನೆ ಎಂದು ಅಸೂಯೆಯನ್ನು ತೋರಿಸಲೂ ಮಾತ್ರ ಅವು ವಿವಾದವನ್ನು ಕೆದುಕುತ್ತಿವೆ. ಒಂದು ರಾಜಕೀಯ ಪಕ್ಷ ಖಾದಿ ಬಗೆಗಿನ ಗಾಂಧೀಜಿಯವರ ವಿಚಾರವನ್ನು ಹೇಗೆ ದುರಾಕ್ರಮಣಿಸಲ್ಪಟ್ಟಿದೆಂಬುದರ ಬಗ್ಗೆ ಚಕಾರವನ್ನೆತ್ತಿಲ್ಲ! ಇದೇ ನಿಜವಾದ ಪ್ರಶ್ನೆ.

ದೇಶದಲ್ಲಿ ಮಾರಾಟವಾಗುವ ಖಾದಿಯಲ್ಲಿ ಶೇ ೬೦ ರಷ್ಟು ನಕಲಿ ಖಾದಿಯಾಗಿದೆ. ಚೀನಾದಲ್ಲಿ ಕೃತಕ ಖಾದಿಯನ್ನು ತಯಾರಿಸಿ ಭಾರತದಲ್ಲಿ ತಂದು ಹಾಕಲಾಗುತ್ತಿದೆ. ವಾರಾಣಾಸಿ ಮತ್ತು ಕಾಂಚಿಪುರಂನಲ್ಲಿರುವ ನೇಕಾರರು ಅವಸಾನದ ಸ್ಥಿತಿಯಲ್ಲಿದ್ದಾರೆ. ಇದಕ್ಕೆ ಕಾರಣ ಚೀನಾದಲ್ಲಿ ಯಂತ್ರಗಳಿಂದ ತಯಾರಿಸಲಾದ ಪದಾರ್ಥಗಳನ್ನು ಭಾರತದಲ್ಲಿ ಪೇರಿಸುತ್ತಿರುವುದೇ ಆಗಿದೆ.ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರಿಗೆ ಪ್ರಸಿದ್ಧವಾಗಿರುವ ಕೊಲ್ಕತ್ತಾ ಹತ್ತಿಬಟ್ಟೆ ತಮ್ಮ ರಾಜ್ಯದಲ್ಲಿ ತಯಾರಾಗುತ್ತಿಲ್ಲವೆಂಬುದು ಗೊತ್ತಿಲ್ಲದೆ ಇಲ್ಲ. ಆದರೆ ಈ ಸತ್ಯ ಸಂಗತಿಗಳಾಗಲೀ ನೇಕಾರರ ಸಾವಾಗಲೀ ಕೈಮಗ್ಗದ ಅವಸಾನವಾಗಲೀ ಈ ರಾಜಕೀಯ ಮುಖಂಡರಿಗೆ ಮುಖ್ಯ ವಿಷಯವೇ ಅಲ್ಲ. ಅವರಿಗೆ ಗಾಂಧೀಯ ಸಂಕೇತ ಬಹು ಮಹತ್ವದ್ದಾಗಿದೆಯೇ ಹೊರತು ಗಾಂಧೀ ಪ್ರತಿಪಾದಿಸಿದ್ದ ವ್ಯವಹಾರ ಯೋಗ್ಯ ಸ್ವಾವಲಂಬನೆಯ ವಿಚಾರ ಹತ್ತಿಯಿಂದ ಮಹತ್ವವಾಗಿಲ್ಲ. ಗಾಂಧೀಜಿಯವರ ಪ್ರಕಾರ ಖಾದಿ ಎಂದರೆ ಕೈಯಲ್ಲಿ ದಾರ ತೆಗೆದು ಕೈಯಿಂದಲೇ ನೇಯ್ಗೆ ಮಾಡಿರುವಂತದು. ಹತ್ತಿಯ ಬೀಜಕ್ಕಾಗಿ ರೈತರು ಕಾರ್ಪೊರೇಟ್ ಕಂಪನಿಗಳನ್ನೇ ಅವಲಂಬಿಸಿರುವುದರಿಂದ ಅವರು ತಮ್ಮ ಸ್ವಾವಲಂಬನೆಯನ್ನು ಕಳೆದುಕೊಂಡಿದ್ದಾರೆ. ರೈತರಲ್ಲಿ ಅತಿಯಾದ ಆತ್ಮಹತ್ಯೆ ಆಗುತ್ತಿರುವುದಕ್ಕೆ ಬೀಜದ ಸ್ವಾವಲಂಬನೆಯನ್ನು ಉದಾಸೀನ ಮಾಡಿರುವುದೇ ಆಗಿದೆ. ಅದರೊಂದಿಗೆ ವ್ಯವಸಾಯದಲ್ಲಿ ಬದಲಾದ ರೀತಿನೀತಿಗಳೂ ಕಾರಣವಾಗಿವೆ.

ಖಾದಿಗೆ ದೊರೆತಿರುವ ಪ್ರಚಾರವನ್ನೂ ಮತ್ತು ಅದರ ಜನಪ್ರಿಯತೆಯನ್ನೂ ಗ್ರಾಮೀಣ ವಿಕೇಂದ್ರಿಕೃತ ಆರ್ಥಿಕ ವ್ಯವಸ್ಥೆ ಅಭಿವೃದ್ಧಿಗೊಳಿಸುವ, ಬಲಪಡಿಸುವ ಸಂಗತಿಯಿಂದ ಅಳೆಯಬೇಕೆಂಬುದೆ ಮಹತ್ವದ ಸಂಗತಿ ಆಗಿದೆ. ಅಲ್ಲದೆ ಖಾದಿ ಅರ್ಥಶಾಸ್ತ್ರದ ಇನ್ನು ಕೆಲವು ಅಂಶಗಳಾದ ಸ್ವಾವಲಂಬನೆ, ಸಮಾನತೆ ಮತ್ತು ನ್ಯಾಯ ಕೂಡ ಖಾದಿ ಪ್ರಸಿದ್ಧಿಗೆ ಅಳತೆಗೋಲಾಗಬೇಕು. ಖಾದಿ ಗ್ರಾಮೋದ್ಯೋಗ ಗ್ರಾಮೀಣ ಜನರಲ್ಲಿ ಆರ್ಥಿಕ ಬಲ ತಂದುಕೊಡುವ ಮುಖ್ಯ ಸಂಗತಿಯಾಗಿದೆ.

ವೈರುಧ್ಯದ ಸಂಗತಿ ಏನೆಂದರೇ ಸ್ವಾತಂತ್ರ್ಯ ಬರುವ ಮುನ್ನವೆ ಕಾಂಗ್ರೆಸ್ ಪಕ್ಷ ಗಾಂಧೀಜಿಯವರ ಮೂಲಭೂತ ಆರ್ಥಿಕ ತತ್ವವನ್ನು ಮೂಲೆ ಗುಂಪಾಗಿಸಿತು.

ಅದು ಖಾದಿ ಮತ್ತು ಗ್ರಾಮೋದ್ಯೋಗಳನ್ನು, ಬೃಹತ್ ಕೈಗಾರಿಕೆಗಳ ಹಿತವನ್ನು ಪ್ರೋತ್ಸಾಹಿಸುವುದರ ಮೂಲಕ ಕಡೆಗಣಿಸಿತು. ಗಾಂಧೀಜಿಯವರ ವಿಚಾರಗಳನ್ನು ಅನುಷ್ಠಾನಕ್ಕೆ ತರುವ ಬದಲು ಗಾಂಧೀಜಿಯವರನ್ನು ಒಂದು ಸಂಕೇತವನ್ನಾಗಿ ಪರಿವರ್ತಿಸಿತು. ಗಾಂಧೀ ಇನ್ನೂ ಜೀವಂತವಾಗಿದ್ದಾಗಲೇ ಅವರ ಆರ್ಥಿಕ ವಿಚಾರಗಳನ್ನು ಶೂನ್ಯವತ್ತಾಗಿ ಮಾಡಿತು. ೧೯೫೭ ರಲ್ಲಿ ಸಂಸತ್ತಿನ ಕಾನುನಿನ ಅನ್ವಯ ಖಾದಿ ಸಂಸ್ಥೆಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುವ ನೀತಿ ಬಂದಾದ ಮೇಲೆ ರಾಜಕೀಯ ಪುಢಾರಿಗಳನ್ನು ಸಾಮಾಜಿಕವಾಗಿ ಪುನರ್ ಸ್ಥಾಪಿಸುವುದಕ್ಕೆ ಖಾದಿ-ಗ್ರಾಮೋದ್ಯೋಗ ಆಯೋಗ ದಾರಿಯಾಯಿತು. ಆ ರೀತಿ ಕೊಡಲ್ಪಟ್ಟ ಸಾಲ ಸಂಸ್ಥೆಗಳ ಸ್ವಾವಲಂಬನೆಯ ತತ್ವವನ್ನೇ ಹಾಳುಮಾಡಿತು.

ಅದಕ್ಕಿಂತ ಹೆಚ್ಚಾಗಿ ಹತ್ತಿ ಮತ್ತು ಪಾಲಿಸ್ಟರ್ ಸೇರಿ ತಯಾರಾಗುವ ನಕಲಿ ಖಾದಿಯ ಉತ್ಪಾದನೆಗೆ ಪ್ರೋತ್ಸಾಹ ಕೊಟ್ಟಿತು. ಈ ಬೆರೆಕೆ ಖಾದಿಗೆ ಸರ್ಕಾರದ ಮನ್ನಣೆ ಇದೆಯಾದ್ದರಿಂದ ಇಂಥ ಭಟ್ಟಂಗಿಗಳಿರುವ ಖಾದಿ ಆಯೋಗವು ಗಾಂಧೀಯ ಚಿತ್ರವನ್ನು ಬದಲಾಯಿಸಲು ತೀರ್ಮಾನಿಸಿದ್ದರೆ ಆಶ್ಚರ್ಯಪಡಬೇಕಾಗಿಲ್ಲ.

ನಕಲಿ ಖಾದಿಯನ್ನೇ ನಮ್ಮ ಪ್ರಧಾನ ಮಂತ್ರಿಯವರು ಪ್ರಚಾರ ಮಾಡುತ್ತಿದ್ದಾರೆ! ಅಂಥ ನಕಲಿ ಖಾದಿಯ ಜನಪ್ರಿಯತೆಯ ಸಂಕೇತವಾಗಿದ್ದಾರೆ. ಖಾದಿಯಲ್ಲಿಯ ನಕಲಿ ತನದ ಬಗ್ಗೆ ಪ್ರಧಾನಿಗೆ ಗೊತ್ತಿಲ್ಲವೆಂದು ಬಾವಿಸುವುದು ದಡ್ಡತನವೆನಿಸುತ್ತದೆ. ರಾಷ್ಟ್ರೀಯ ಸ್ವಯಂ ಸೇವಾಸಂಘ ಕುಶಲ ಪ್ರಚಾರಕರಾಗಿ ಕಷ್ಟಪಟ್ಟು ಕೆಲಸ ಮಾಡಿ ಅವರು ಮುಖ್ಯಮಂತ್ರಿಯಾಗಿ ನಂತರ ಪ್ರಧಾನಿಯಾದವರು. ಅವರು ಮನಸ್ಸು ಮಾಡಿದರೆ ಸ್ವಾಭಾವ ಸಿದ್ಧ ಕುಶಲತೆಯನ್ನು ವ್ಯವಹಾರಕ್ಕೆ ತಂದು ಖಾದಿಯನ್ನು ಉಳಿಸಬಹುದಾಗಿದೆ. ಇಲ್ಲವಾದರೆ ಅವರ ಖಾದಿ ಪ್ರಚಾರ ಈ ಮೊದಲಿನ ಗಾಂಧೀಯವರ ಸ್ವಚ್ಛ ಭಾರತ ಮತ್ತು ಪರಿಸರ ಪ್ರೇಮದ ಪಟ್ಟಿಗೆ ಸೇರಿದಂತಾಗುತ್ತದೆ. ನಿಜವಾದ ಮೋದಿ ,ನಕಲಿ ಖಾದಿ ವಿರುದ್ಧ ಮುಖಾಮುಖಿಯಾಗುವರೇ?

ಡೆಕನ್ ಹೆರಾಲ್ಡ್
ಅನು ಸು.ಕೌ

ಗಾಂಧೀ ಆಗುವುದರ ಅರ್ಥ

– ಸಂದೀಪ ಪಾಂಡೆ

ಖಾದಿ ಆಯೋಗ ಪ್ರಕಟಿಸುವ ಕ್ಯಾಲೆಂಡರ್‌ಗಳಲ್ಲಿ ಗಾಂಧೀಯವರು ಚರಖದಿಂದ ನೂಲು ತೆಗೆಯುವ ಚಿತ್ರವಿರುತ್ತದೆ. ಈ ವರ್ಷದ ಕ್ಯಾಲೆಂಡರ್‌ಗಳಲ್ಲಿ ಗಾಂಧೀಜಿಯವರ ಚಿತ್ರದ ಬದಲು ಮೋದಿಯವರ ಚಿತ್ರ ಪ್ರಕಟಗೊಂಡಿದೆ. ಈ ವಿಷಯ ವಿವಾದಕ್ಕೊಳಗಾಗಿದೆ. ಸ್ವಚ್ಛ ಭಾರತ ಅಭಿಯಾನಕ್ಕಾಗಿ ಪೊರಕೆಯನ್ನು ಸಂಕೇತವನ್ನಾಗಿ ಉಪಯೋಗಿಸಿಕೊಂಡಾಗ ಏಕೆ ವಿವಾದ ಉಂಟಾಗಲಿಲ್ಲವೆಂದು ಮೋದಿಯವರ ಬೆಂಬಲಿಗರು ಕೇಳುತ್ತಿದ್ದಾರೆ. ಗಾಂಧೀಯವರ ಕನ್ನಡಕವು ಮಾತ್ರ ಸ್ವಚ್ಛ ಭಾರತ ಪ್ರಚಾರಸಾಹಿತ್ಯದ ಮೇಲೆಲ್ಲಾ ಕಾಣಿಸಿಕೊಳ್ಳುತ್ತಿದೆ.

ಪೊರಕೆ ಮೇಲಾಗಲೀ ಚರಖದ ಮೇಲಾಗಲೀ ಗಾಂಧೀಯವರ ಒಡೆತನವೇನಿಲ್ಲ. ಈ ಯಾವುದೇ ವಸ್ತುವಿನೊಂದಿಗೆ ಭಾವಚಿತ್ರ ಪಡೆಯಲು ಎಲ್ಲರಿಗೂ ಹಕ್ಕಿದೆ.

ಮೋದಿಯವರು ಮಹಾತ್ಮರನ್ನು ತಮ್ಮ ಆದರ್ಶವೆಂದು ಭಾವಿಸಲು ಪ್ರಾರಂಭಿಸಿದ್ದರೆ ಅದಕ್ಕಿಂತಲೂ ಉತ್ತಮವಾದದ್ದು ಏನಿದೆ?

ಕಳೆದ ವರ್ಷ ಮೋದಿಯವರು ದಕ್ಷಿಣ ಆಫ್ರೀಕಾಕ್ಕೆ ಭೇಟಿಕೊಟ್ಟಿದ್ದರು. ಯಾವ ರೈಲಿನಿಂದ ಹೊರಗೆ ದಬ್ಬಲ್ಪಟ್ಟಿದ್ದ ಆ ರೈಲಿನಲ್ಲಿಯೇ ಪ್ರಯಾಣ ಮಾಡಿ ಪೋನಿಕ್ಸ್ ಆಶ್ರಮ ತಲುಪಿದರು. ನರೇಂದ್ರ ಮೋದಿಯವರ ಮಾತೃಸಂಸ್ಥೆಯಾದ ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ ಗಾಂಧೀಯವರ ಬಗ್ಗೆ ಅಂಥ ಒಳ್ಳೆಯ ಅಭಿಪ್ರಾಯವಿಲ್ಲ ನಿಜ ಹೇಳಬೇಕೆಂದರೆ ಆ ಸಂಘಟನೆಯ ಸಿದ್ಧಾಂತವೇ ಗಾಂಧೀಯವರ ಹತ್ಯೆಗೆ ಕಾರಣವಾಗಿದೆ. ನರೇಂದ್ರ ಮೋದಿಯವರು ಗಾಂಧೀಯವರ ಮಹತ್ವವನ್ನರಿತು ಗಾಂಧೀಯವರ ಬಗೆಗಿನ ಆರ್‌ಎಸ್‌ಎಸ್‌ನ ಅಭಿಪ್ರಾಯವನ್ನು ಬದಲಾಯಿಸಲು ಸಮರ್ಥರಾಗುವುದಾದರೆ ಅದೊಂದು ಮಹತ್ ಸಾಧನೆಯೇ ಸರಿ.

ಜಗತ್ತಿನಾದ್ಯಂತ ಜನರು ಯಾವುದೇ ಓರ್ವ ವ್ಯಕ್ತಿಯೊಂದಿಗೆ ಭಾರತವನ್ನು ಗುರ್ತಿಸುವುದಾದರೆ ಆ ವ್ಯಕ್ತಿ ಗಾಂಧೀಯೇ! ಬಹುಶಃ ಗೌತಮ ಬುದ್ಧನ ಅನುಯಾಯಿಗಳು ಹೆಚ್ಚಾಗಿದ್ದಾರೆ. ಆದರೆ ಬೌದ್ಧಧರ್ಮಿಯರಾಗಲೀ ಜಗತ್ತಾಗಲೀ ಗೌತಮಬುದ್ಧನನ್ನು ಗಾಂಧೀಯವರಂತೆ ಕೇವಲ ಭಾರತೀಯನನ್ನಾಗಿ ನೋಡುವುದಿಲ್ಲ.

ಅನ್ಯಾಯಕ್ಕೆ ಒಳಗಾದ ಜನರು ತಮ್ಮ ಮೂಲಭೂತ ಹಕ್ಕಿಗಾಗಿ ಬಲಿಷ್ಠ ಶಕ್ತಿಗಳ ವಿರುದ್ಧ ನಡೆಸುತ್ತಿರುವ ಜಗತ್ತಿನಾದ್ಯಂತದ ಹೋರಾಟಗಳಿಗೆ ಗಾಂಧೀಯೇ ಪ್ರೇರಣೆಯ ಮೂಲವಾಗಿದ್ದಾರೆ.

ಪೊರಕೆ ಮತ್ತು ಚರಖದೊಂದಿಗೆ ಭಾವಚಿತ್ರ ತೆಗೆಸಿಕೊಂಡಾಕ್ಷಣ ತಮ್ಮನ್ನು ಜನರು ಗಾಂಧೀಯವರ ಸಮಾನವಾಗಿ ನೋಡುವುದಿಲ್ಲವೆಂಬುದನ್ನು ಮೋದಿ ಅರ್ಥಮಾಡಿಕೊಳ್ಳಬೇಕು.

ಗಾಂಧೀಯವರು ತಾವು ಪ್ರತಿಪಾದಿಸಿದ್ದ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡದ್ದಲ್ಲದೆ ಅದಕ್ಕಾಗಿ ಸಾವನ್ನೂ ಅಪ್ಪಿದರು. ಆ ಕಾರಣದಿಂದಾಗಿ ಜನರ ಮೇಲೆ ಗಾಂಧೀಯವರ ಪ್ರಭಾವವಿದೆ. ಗಾಂಧೀಯವರ ಆಶ್ರಮಗಳಲ್ಲಿ ಸ್ವಚ್ಛತೆಯನ್ನು ಚಾಚು ತಪ್ಪದೇ ಪಾಲಿಸಲಾಗುತ್ತಿತ್ತು. ಆಶ್ರಮವಾಸಿಗಳು ಶೌಚಾಲಯಗಳನ್ನು ಸ್ವಚ್ಛ ಮಾಡುತ್ತಿದ್ದರು. ಚರಖದ ಮೇಲೆ ನೂತ ದಾರದಿಂದಲೇ ತಯಾರಿಸಿದ ಖಾದಿಯನ್ನು ಧರಿಸುತ್ತಿದ್ದರು. ಜನರಿಗೆ ಉದ್ಯೋಗ ಸೃಷ್ಟಿಸುವಂತಹ ಸ್ಥಾನೀಯ ತಂತಜ್ಞಾನವನ್ನು ಉಪಯೋಗಿಸಿ ಸ್ಥಳೀಯ ಬೇಡಿಕೆಗಳನ್ನು ಪೂರೈಸಿಕೊಳ್ಳುವುದೇ ಚರಖದ ಹಿಂದಿರುವ ತತ್ವಜ್ಞಾನ: ಸ್ವರಾಜ್ಯ ಸ್ಥಾಪನೆ ಅದರ ಗುರಿಯಾಗಿತ್ತು. ನರೇಂದ್ರ ಮೋದಿಯವರು ಅನುಷ್ಠಾನಕ್ಕೆ ತರುತ್ತಿರುವ ನವಆರ್ಥಿಕನೀತಿಗಳು ಶ್ರೀಮಂತ ಮತ್ತು ಬಡವರ ಮಧ್ಯೆಯಿರುವ ಕಂದಕವನ್ನು ದೊಡ್ಡದಾಗಿ ಮಾಡುತ್ತಿದೆ ಎಂಬುದು ಜಾಗತಿಕ ಅನುಭವವೇ ಆಗಿದೆ. ಗಾಂಧೀ ಸ್ಥಳೀಯ ಸಂಪನ್ಮೂಲಗಳಿಗೆ ಪ್ರಾಮುಖ್ಯತೆ ಕೊಟ್ಟಿದ್ದರೆ ಮೋದಿಯವರು ವಿದೇಶಿ ಬಂಡವಾಳ ಹೂಡಿಕೆಯ ಕಡೆಗೆ ಆಕರ್ಷಿತರಾಗಿದ್ದಾರೆ.

ಪೊರಕೆ ಮತ್ತು ಚರಖ ಭೌತಿಕ ವಸ್ತುಗಳು. ಇವುಗಳಿಂದಷ್ಟೆ ಗಾಂಧೀ ಪ್ರಸಿದ್ಧರಾಗಿಲ್ಲ. ಜನರ ಹೃದಯದಲ್ಲಿ ಅವರಿಗೊಂದು ಸ್ಥಾನವಿದೆ. ಅದಕ್ಕೆ ಕಾರಣ ಅವರು ಪ್ರತಿಪಾದಿಸಿದ್ದ ಸತ್ಯ ಮತ್ತು ಅಹಿಂಸೆ ಹಾಗೂ ಜಗತ್ತಿಗೆ ಕೊಟ್ಟ ಸತ್ಯಾಗ್ರಹದ

ಕಾಣಿಕೆ. ಸತ್ಯದ ದಾರಿ ಕಠಿಣ ಮತ್ತು ಧೀರ್ಘ. ಯಶಸ್ಸಿನ ಸಂಪಾದನೆಗೆ ಅಡ್ಡದಾರಿ ಮತ್ತು ಹೊಂದಾಣಿಕೆಗಳಿಗೆ ಅವಕಾಶವಿಲ್ಲ. ಈ ದಾರಿಯಲ್ಲಿ ವಿಜೃಂಭಣೆ ಇಲ್ಲ, ಅತಿಶಯೋಕ್ತಿ ಇಲ್ಲ. ಒಬ್ಬ ವ್ಯಕ್ತಿ ಯಾವ ರೀತಿ ಇರಬಹುದೋ ಅದೇ ರೀತಿ ಕಾಣಿಸಿಕೊಳ್ಳಬೇಕು. ತನ್ನ ದೌರ್ಬಲ್ಯಗಳನ್ನು ಮುಚ್ಚಿಡಕೂಡದು.

ಅಹಿಂಸೆಯು ಮನುಕುಲಕ್ಕೆ ಸಹಜ ಸ್ಥಿತಿ, ಆದರೆ ಮಾನವರು ತಮ್ಮ ಸ್ವಾರ್ಥ ಸಾಧನೆಗಾಗಿ ಹಿಂಸೆಗೆ ಶರಣು ಹೋಗುತ್ತಾರೆ. ಬಹುಶಃ ಪ್ರತಿ ಓರ್ವ ಆಡಳಿತಗಾರನು ಕೆಲಹಂತದವರೆಗೆ ಹಿಂಸೆಯನ್ನು ಮಾಡಬೇಕಾಗುತ್ತದೆ. ಆದರೆ ಅಹಿಂಸೆಯಲ್ಲಿ ನಂಬಿಕೆಯಿಡುವವರು ಜನರನ್ನು ಭೀತಿಗೊಳಿಸುವುದಿಲ್ಲ. ಭಯದ ವಾತಾವರಣವನ್ನೂ ನಿರ್ಮಿಸುವುದಿಲ್ಲ. ಅವನು ಯುದ್ಧ ಮತ್ತು ಶಸ್ತ್ರಾಸ್ತ್ರಗಳನ್ನು ಕುರಿತು ಮಾತನಾಡುವುದಿಲ್ಲ. ಯಾರನ್ನೂ ಶತ್ರುವೆಂದು ಭಾವಿಸುವುದಿಲ್ಲ.

ಶತ್ರುವನ್ನು ನಾಶಮಾಡುವ ಉತ್ತಮ ರೀತಿ ಶತ್ರುವಿನೊಂದಿಗೆ ಸ್ನೇಹ ಬೆಳೆಸಿಕೊಳ್ಳವುದು! ಇಲ್ಲಿ ಬ್ರಿಟೀಷ್‌ರೊಂದಿಗಿನ ಗಾಂಧೀಯವರ ಸಂಬಂಧವನ್ನು ಜ್ಞಾಪಿಸಿಕೊಳ್ಳಬೇಕು. ಅವರು ಯಾವುದೇ ವ್ಯಕ್ತಿಯನ್ನು ತನ್ನ ಶತ್ರು ಎಂದು ಭಾವಿಸದೆ ದೃಢವಾಗಿ ಸಾಮ್ರಾಜ್ಯದ ವಿರುದ್ಧ ಹೋರಾಡಿದರು. ಆದ್ದರಿಂದಲೇ ಬ್ರಿಟೀಷರಿಗೆ ಗಾಂಧೀಯವರ ಬಗ್ಗೆ ಗೌರವವಿತ್ತು.

ಗಾಂಧೀಯವರು ಹಿಂದೂ ಮುಸ್ಲಿಂ ಐಕ್ಯತೆಯ ಪರಾವಾಗಿದ್ದರು. ಆದರೆ ನರೇಂದ್ರ ಮೋದಿಯವರ ಆಳ್ವಿಕೆಯಕಾಲದಲ್ಲಿ ಆ ಎರಡು ಸಮುದಾಯಗಳ ಮಧ್ಯದ ಕಂದಕ ಅಗಲವಾಗಿದೆ. ಬಲಪಂಥೀಯರು ಯಾರ ಮೇಲಾದರೂ ದಾಳಿ ಮಾಡಿದರೆ

ಸರಕಾರವು ಕೇಡಿಗಳನ್ನು ನಿರ್ಬಂಧಿಸದೇ ಅವರಿಗೆ ಬೆಂಬಲ ಕೊಟ್ಟಿತು. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ

ನೌಖಾಲಿಯಲ್ಲಿ ಕೋಮುಗಲಭೆಯಾದಾಗ ಅದನ್ನು ನಂದಿಸಲು ಗಾಂಧೀ ಪ್ರಯತ್ನಿಸಿದರು. ೧೯೦೨ರಲ್ಲಿ ಗುಜರಾತ್‌ನಲ್ಲಿ ಮೂರು ದಿನಗಳ ಕಾಲ ಸತತವಾಗಿ ಕೋಮುಗಲಭೆಗಳು ನಡೆದವು. ಈ ಒಂದು ಘಟನೆಯ ಜವಾಬ್ದಾರಿಯನ್ನು ಮೋದಿಯವರು ಒಪ್ಪಿಕೊಳ್ಳುವರೇ?

ಸಾರ್ವಜನಿಕ ಜೀವನಕ್ಕಾಗಿ ತಮ್ಮ ಕೌಟುಂಬಿಕ ಜೀವನವನ್ನು ತ್ಯಾಗ ಮಾಡಿರುವುದಾಗಿ ಮತ್ತು ಅವರ ಕುಟುಂಬದ ಸದಸ್ಯರು ಮೋದಿಯವರ ಕೆಲವು ರೀತಿಗಳ ಬಗ್ಗೆ ವಿರೋಧಿಸಿದಾಗ. ಮೋದಿ ಅವರನ್ನು ತಮ್ಮ ಜೊತೆ ಕರೆದುಕೊಂಡು ಹೋಗಲು ಬಹಳವಾಗಿ ಪ್ರಯತ್ನಿಸಿದಾಗಿಯೂ ಮೋದಿ ಹೇಳುತ್ತಾರೆ.

ಬಡವರನ್ನು ಗಮದಲ್ಲಿರಿಸಿಕೊಂಡೆ ಗಾಂಧೀ ತಮ್ಮ ಕಾರ್ಯಕ್ರಮ ರೂಪಿಸಿಕೊಳ್ಳುತ್ತಿದ್ದರು. ಆದರೆ ನರೇಂದ್ರ ಮೋದಿಯವರ ಸರ್ಕಾರವು ಬಡವರಿಗಿಂತ ಹೆಚ್ಚಾಗಿ ಶ್ರೀಮಂತರಿಗೆ ಲಾಭದಾಯಕ ಕೆಲಸ ಮಾಡುತ್ತಿದೆ. ವಾಸ್ತವಿಕವಾಗಿ ಬಡವರು ಮೋದಿಯವರ ರಾಜ್ಯದಲ್ಲಿ ಹೆಚ್ಚು ಅಭದ್ರತೆಯ ಸ್ಥಿತಿಯನ್ನು ಅನುಭವಿಸುತ್ತಿದ್ದಾರೆ.

ಗಾಂಧೀಯವರ ಮೌಲ್ಯಗಳನ್ನು ತಮ್ಮ ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳದೇ ತಮ್ಮ ಸ್ವರೂಪವನ್ನು ಉನ್ನತಿಕರಿಸಿಕೊಳ್ಳಲು ಗಾಂಧೀಯವರನ್ನು ತೋರಿಕೆಗೆ ಪ್ರತಿಪಾದಿಸಿದರೆ ಅದು ಅವರಿಗೆ ನೆರವಾಗಲಾರದು. ಗಾಂಧೀಯವರು ಯಾವುದೇ ರಾಜಕೀಯ ಅಧಿಕಾರದ ಬಗ್ಗೆ ಆಸೆಯನ್ನು ಹೊಂದಿರಲಿಲ್ಲ. ಅವರು ಜನತೆಯ ಹೃದಯವನ್ನು ಗೆದ್ದರು ಮತ್ತು ಈಗಲೂ ಅದು ಮುಂದುವರೆಯುತ್ತಿದೆ. ಓರ್ವ ವ್ಯಕ್ತಿ ಅಧಿಕಾರದಲ್ಲಿ ಇರುವವರೆಗೆ ಮಾತ್ರ ಜನರು ಅವನಿಗೆ ಗೌರವ ತೋರಿಸುತ್ತಾರೆ. ಅಧಿಕಾರವನ್ನು ಕಳೆದುಕೊಂಡ ತಕ್ಷಣ ಜನರು ಆತನನ್ನು ಮರೆಯುತ್ತಾರೆ.

ಗಾಂಧೀ ಮಾಡಿದ ಎಲ್ಲಾ ಕಾರ್ಯದ ಹಿಂದೆ ಆಧ್ಯಾತ್ಮಿಕದ ಚಿಂತನೆ ಇರುತ್ತಿತ್ತು. ವ್ಯವಸ್ಥಾನಿರ್ವಹಣೆಯ ಕೆಲಸದಲ್ಲಿ ಕೆಲವು ವಿಚಾರಗಳನ್ನು ಮಾತ್ರ ತೆಗೆದುಕೊಂಡು ಉಳಿದಿದನ್ನು ಬಿಟ್ಟರೆ ಅದು ಅಪ್ರಯೋಜಕ. ಚರಕವನ್ನು ಸಮರ್ಥಿಸುವುದರ ಮೂಲಕ ತಾವು ಗಾಂಧೀಯವರ ಚಿಂತನೆಯನ್ನು ಸಮರ್ಥಿಸುತ್ತಿದ್ದೇವೆ ಎಂದು ತಿಳಿಯಬೇಕೆಂದು ಮೋದಿ ಬಯಸುತ್ತಿದ್ದರೆ, ತಮ್ಮ ಸ್ನೇಹಿತ ಅಂಬಾನಿಯವರಿಗೆ ರಕ್ಷಣಾ ಇಲಾಖೆಗೆ ಸಂಬಂಧಿಸಿದ ವ್ಯವಹಾರ ಮಾಡಲು ಸಹಾಯ ಮಾಡುತ್ತಿರಲಿಲ್ಲ.

ತಮ್ಮ ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಜನರನ್ನು ಭಯಪಡಿಸುತ್ತ ಹೋದರೆ ಮತ್ತು ಅವ್ಯಾಹತವಾಗಿ ಅಸಂಗತ ಹೇಳಿಕೆಗಳನ್ನು ಕೊಡುತ್ತಾ ಹೋದರೆ ಮೋದಿಯವರನ್ನು ಓರ್ವ ಜಾಗತಿಕ ಮುಖಂಡನೆಂದು ಪರಿಗಣಿಸಲಾಗುವುದಿಲ್ಲ.

(ಸಾಭಾರ "ಜನತಾ")

ಅನು. ಸು.ಕೌ

ಪತ್ರಿಕೆಯ ಒಡೆತನದ ವಿವರ
ನಮೂನೆ iv

ಪ್ರಕಟನೆಯ ಸ್ಥಳ	:	ಮೇಲುಕೋಟೆ
ಮುದ್ರಕರ ಹೆಸರು	:	ಶ್ರೀ.ಬಸವರಾಜು.ಸಿ.
ರಾಷ್ಟ್ರೀಯತೆ	:	ಭಾರತೀಯ
ವಿಳಾಸ	:	ಸಂಖ್ಯೆ. ೧೪೫೫ ಚಂದ್ರಗಿರಿ ಡಾ॥ ರಾಜಕುಮಾರ್,ಬಡಾವಣೆ, ಮಂಡ್ಯ
ಪ್ರಕಾಶಕರ ಹೆಸರು	:	ಸುರೇಂದ್ರ ಕೌಲಗಿ
ರಾಷ್ಟ್ರೀಯತೆ	:	ಭಾರತೀಯ
ವಿಳಾಸ	:	ಜನಪದ ಸೇವಾ ಟ್ರಸ್ಟ್ ಕಲ್ಯಾಣಿ ಬೀದಿ ಮೇಲುಕೋಟೆ ಮಂಡ್ಯ (ಜಿ)
ಸಂಪಾದಕರು	:	ಸುರೇಂದ್ರ ಕೌಲಗಿ
ರಾಷ್ಟ್ರೀಯತೆ	:	ಭಾರತೀಯ
ವಿಳಾಸ	:	ಮೇಲಿನಂತೆ
ಒಡೆತನ ಹೊಂದಿದವರ ಹೆಸರು ಮತ್ತು ವಿಳಾಸ	:	ಜನಪದ ಸೇವಾ ಟ್ರಸ್ಟ್ ಕಲ್ಯಾಣಿ ಬೀದಿ ಮೇಲುಕೋಟೆ ಮಂಡ್ಯ (ಜಿ)

ಮೇಲ್ಕಾಣಿಸಿದ ವಿವರಗಳು ಸತ್ಯ.

ದಿನಾಂಕ:೨೮/೦೨/೨೦೧೭ ಸುರೇಂದ್ರ ಕೌಲಗಿ

ಸ್ಥಳ: ಮೇಲುಕೋಟೆ

ನಾಥುರಾಮಗೆ ಬಾಪೂನ ಪತ್ರ

ಪ್ರೀಯ ನಾಥುರಾಮ, ನಿನ್ನನ್ನು ಪ್ರಿಯ ಎಂಬ ರೂಪದಲ್ಲಿ ಸಂಬೋಧನೆ ಮಾಡಿದ್ದೇನೆ. ಅದಕ್ಕಾಗಿ ನೀನು ಸ್ವಲ್ಪವೂ ಆಶ್ಚರ್ಯ ಪಡಬೇಕಿಲ್ಲ. ಏಕೆಂದರೆ ನಿನ್ನನ್ನೇ ಏಕೆ, ಯಾರನ್ನೇ ಆಗಲಿ ತಿರಸ್ಕರಿಸಲು ನನಗೆ ಬರುವುದೇ ಇಲ್ಲ. ನೀನು ಬೇಕಾದರೆ ಅದನ್ನು ನನ್ನ ದೌರ್ಬಲ್ಯವೆಂದಾಲೀ ಅಥವಾ ನನ್ನ ಡೊಂಗಿತನವೆಂದಾಲೀ ತಿಳಿದುಕೊ ಆದರೆ ತಿರಸ್ಕಾರದ ಭಾವನೆಯನ್ನು ಸೋಲಿಸಲು ನಾನು ಬಹು ಕಷ್ಟಪಟ್ಟಿದ್ದೇನೆ.

ಯಾವ ಬ್ರಿಟಿಷ್‌ರು ನಮ್ಮ ದೇಶವನ್ನು ಆಳಿದರೋ ಅವರ ಸರ್ಕಾರಕ್ಕೆ ಸೇರಿದ ಇಪ್ಪತ್ತುಮೂರು ಪೋಲಿಸರನ್ನು ಜನಜಂಗುಳಿ ಇದ್ದ ಪೇಟೆಯಲ್ಲಿ "ಅಸಹಯೋಗ ಆಂದೋಲನದ" ಸಂದರ್ಭದಲ್ಲಿ ಜೀವಂತವಾಗಿ ಸುಟ್ಟಾಗ ನಾನು ಆ ಆಂದೋಲನವನ್ನೇ ಹಿಂದಕ್ಕೆ ತೆಗೆದುಕೊಂಡೆ ಮತ್ತು ಪ್ರಾಯಶ್ಚಿತ್ ಮಾಡಿಕೊಂಡೆ ನನ್ನ ಹೋರಾಟ ಬ್ರಿಟಿಷ್ ರಾಜ್ಯದ ವಿರುದ್ಧ ವಿತ್ತೇಹೊರತು ಬ್ರಿಟಿಷ್‌ರ ವಿರುದ್ಧವಲ್ಲ!

೩೦ ಜನವರಿ ೧೯೪೮ರಂದು ಯಾವಾಗ ನೀನು ನನ್ನ ಎದೆಗೆ ಮೂರು ಗುಂಡು ಹೊಡೆದು ನನ್ನ ಹತ್ಯೆ ಮಾಡಿದೆಯೋ ಅದೇ ದಿನದಿಂದ ನಿನ್ನ ಮತ್ತು ನನ್ನ ಹೆಸರು ಇತಿಹಾಸದಲ್ಲಿ ಸದಾ ಕಾಲಕ್ಕೂ ಸೇರ್ಪಡೆಗೊಂಡಿತು. ಆದರೆ ನೀನು ನನ್ನ ಶರೀರವನ್ನು ಹತ್ಯೆ ಮಾಡಿದಿಯೇ ಹೋರತು, ನನ್ನ ವಿಚಾರಗಳನ್ನು ಹತ್ಯೆ ಮಾಡಲು ಸಾಧ್ಯವಾಗಲ್ಲಿಲ್ಲ, ಇದನ್ನು ನಿನಗೆ ಯಾರೂ ತಿಳಿಸಲ್ಲಿಲ್ಲವೇಕೆ? ವಸ್ತುತಃ ಇದಕ್ಕಾಗಿ ನನಗೆ ದುಃಖವಾಗುತ್ತದೆ. ಆ ದುಃಖ ಗುಂಡಿನಿಂದ ನೀ ಕೊಟ್ಟ ವೇದನೆಗಿಂತಲೂ ಅಧಿಕ! ನನ್ನ ವಿಚಾರಗಳು ಕೂಡ ನನ್ನ ಒಬ್ಬನದೇ ಆಗಿರಲಿಲ್ಲವಲ್ಲ? ಮಹಾವೀರ, ಬುದ್ಧ ಮತ್ತು ಏಸು ಪ್ರತಿಪಾದಿಸಿದ ಅಹಿಂಸೆಯನ್ನೇ ನನ್ನ ಹೃದಯದಲ್ಲಿಟ್ಟುಕೊಂಡು ನಡೆಯುತ್ತಿದ್ದೆ. ಆ ಮೂವರೂ ಹೊರಟುಹೋದರು. ಆದರೆ ಅವರ ವಿಚಾರ ಅನೇಕ ವರ್ಷಗಳು ಕಳೆದಿದ್ದರೂ ಸಮಾಪ್ತವಾಗಿಲ್ಲ, ಆಗುವುದೂ ಇಲ್ಲ. ಅಂದಮೇಲೆ ನನ್ನನ್ನು ಸಾಯಿಸಿದ್ದರಿಂದ ಇಂಥ ಚಿರಸ್ಥಾಯಿ ವಿಚಾರಗಳ ಮೇಲೆ ಯಾವ ದೊಡ್ಡ ದಾಳಿಮಾಡುವವನಾಗಿದ್ದೆ?

ನಿನ್ನ ಗಲ್ಲುಶಿಕ್ಷೆಯನ್ನು ಬೇರೆ ಯಾವುದೇ ರೀತಿಯ ಶಿಕ್ಷೆಯಲ್ಲಿ ಬದಲಾಯಿಸಬೇಕೆಂದು ಪತ್ರವನ್ನು ಬರೆದು ಸರ್ಕಾರವನ್ನು ಪ್ರಾರ್ಥಿಸಿದ್ದೆ

ದೌರ್ಭಾಗ್ಯದಿಂದ ಹಾಗೆ ಆಗಲಿಲ್ಲ. ಒಂದುವೇಳೆ ಹಾಗೆ ಆಗಿದ್ದರೆ ಬುದ್ಧ, ಮಹಾವೀರ, ಮತ್ತು ಏಸುವಿನ ರೀತಿ ಅಹಿಂಸೆಯ ಕ್ರಾಂತಿಯ ಮಾರ್ಗದ ಮೇಲೆ ನಡೆಯುತ್ತಿರುವ ಅಮೇರಿಕಾದ ಮ್ಹಾರ್ಟಿನ ಲೂಥರ ಕಿಂಗ್ ಮತ್ತು ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೆಲಾ ಅಂಥವರನ್ನು ನೋಡಬಹುದಾಗಿತ್ತು. ನಿಶ್ಚಿತವಾಗಿಯೂ ನಿನ್ನ ವಯಸ್ಸು ಇತ್ತು.

ನಿನ್ನ ಮೇಲೆ ಮುಕದ್ದಮೆ ನಡೆಯುತ್ತಿದ್ದಾಗ ನ್ಯಾಯಾಲಯ ಒಂದು ವಾರದ ವರೆಗೆ ನಿನ್ನ ವಾದವನ್ನು ಮಂಡಿಸಲು ಅವಕಾಶವನ್ನು ಮಾಡಿಕೊಟ್ಟಿತು. ಇದೇ ರೀತಿ ನನಗೂ ನನ್ನ ವಾದವನ್ನು ಮಂಡಿಸಲು ಅವಕಾಶ ಕೊಟ್ಟಿದ್ದರೆ, ನಾನು ಯಥಾಶಕ್ತಿ ನಿನ್ನ ಪ್ರತಿಯೊಂದು ಪ್ರಶ್ನೆಗೆ ಉತ್ತರ ಕೊಡಬಹುದಾಗಿತ್ತು ಮತ್ತು ನಿನ್ನ ಶಕ್ತಿಯನ್ನು ರಚನಾತ್ಮಕ ಮಾರ್ಗದತ್ತ ಕೊಂಡ್ಯೊಯ್ಯಲು ಸಮರ್ಥನಾಗುತ್ತಿದ್ದೆ ಅಂಗೂಲಿಮಾಲನ ಬಳಿ ರಿವಾಲ್ವಾರ ಇಲ್ಲದಿದ್ದುದು ಒಳ್ಳೆಯದಾಯಿತು. ಇದ್ದಿದ್ದರೆ ಬುದ್ಧನಿಗೆ ಒಂದು ಪ್ರಶ್ನೆಯನ್ನೂ ಕೇಳದೆ ಅವನನ್ನು ಕೂಡ ನನ್ನ ಹಾಗೆ ಮುಗಿಸಿಬಿಡುತ್ತಿದ್ದ ಮತ್ತು ಆ ಅಂಗೂಲಿಮಾಲ ಓರ್ವ ಕೊಲೆಗಾರನಾಗಿ ಉಳಿದು ಬಿಡುತ್ತಿದ್ದ. ತಾಂತ್ರಿಕತೆಯ ಪ್ರಗತಿ ಹೇಗೆ ಅವಿಚಾರದ ವ್ಯಕ್ತಿಯ ಮೇಲೆ ಪ್ರಹಾರ ಮಾಡುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆ.

ನಿನಗೆ ಹಿಂದೂ ರಾಷ್ಟ್ರದ ನಿರ್ಮಾಣ ಮಾಡಬೇಕಾಗಿತ್ತೆಂಬುದು ನನಗೆ ಗೊತ್ತಾಗಿದೆ. ಆದರೆ ನನ್ನನ್ನು ಕೊಂದು ಯಾವ ರೀತಿ ನೀನು ನಿನ್ನ ಉದ್ದೇಶವನ್ನು ಪೂರ್ಣಗೊಳಿಸುವವನಾಗಿದ್ದೆ ಎಂಬುದು ನನಗೆ ಇದುವರೆಗೆ ಗೊತ್ತಾಗಿಲ್ಲ. ನಾನು ಯಾವುದೇ ಪಕ್ಷದೊಂದಿಗೆ ಸಂಬಂಧ ಇಟ್ಟುಕೊಂಡಿದ್ದಿಲ್ಲ ಮತ್ತು ಯಾವುದೇ ಧರ್ಮದ ಪ್ರಚಾರಕನಾಗಿರಲಿಲ್ಲ. ಒಂದು ವೇಳೆ ಹಿಂದೂಧರ್ಮದ ಬಗ್ಗೆ ಮಾತನಾಡುತ್ತಿದ್ದರೆ ಈ ಜನ್ಮವನ್ನು ಹಿಂದೂವಿನ ರೂಪದಲ್ಲಿಯೇ ಕಳೆದೆ. ವ್ಯತ್ಯಾಸವಿಷ್ಟೆ, ಯಾವ ಹಿಂದೂಧರ್ಮದಲ್ಲಿ ನಾನು ಬದುಕಿದೆನೋ ಅದು ಅನ್ಯ ಧರ್ಮಿಯರ ಬಗ್ಗೆ ದ್ವೇಷ ಸಾಧಿಸುವುದರ ಬದಲು ಪ್ರೇಮ ಮಾಡುವುದನ್ನು ಕಲಿಸಿತ್ತು. ಅವರೊಂದಿಗೆ ಶಾಂತಿಪೂರ್ಣವಾದ ಸಹಜೀವನ ನಡೆಸುವ ಕಲೆಯನ್ನು ಕಲಿಸಿತ್ತು. ನಿನ್ನ ಕಲ್ಪನೆಯ ಹಿಂದೂ ಧರ್ಮ ಅಕಲ್ಪನೀಯ ಮತ್ತು ಭಯಾನಕ.

ಸಹೋದರನೆ! ನನಗೆ ಇಂದು ಕೂಡ ನಿನ್ನ ಬಗ್ಗೆ ಒಂದು ಮಾತು ಬಹಳ ಕೆಟ್ಟದೆನಿಸುತ್ತದೆ. ಅದೇನೆಂದರೇ ನೀನು ಒಬ್ಬಟ್ಟಿಗನಾಗಿ ಉಳಿದಿದ್ದೇಯೇ. ನನ್ನ ಮೃತ್ಯುವಿನ ಹಲವಾರು ದಶಕಗಳು ಕಳೆದ ಮೇಲೂ ಜಗತ್ತಿನ ಎಲ್ಲ ಜನರು ನನ್ನನ್ನು ತಮ್ಮ ಜೀವನನದ ಭಾಗವೆಂದು ಸ್ವೀಕರಿಸುತ್ತಾರೆ. ನನ್ನ ಹೆಸರಿನ ಅಂಚೆ ಚೀಟಿ ಪ್ರಕಟಿಸುತ್ತಾರೆ. ಮಾರ್ಗಗಳಿಗೆ ನನ್ನ ಹೆಸರಿಡಲಾಗುತ್ತದೆ.

ಆದರೆ ನೀನು ಬಹಳ ಉದಾಸೀನಕ್ಕೆ ಒಳಪಡಬೇಕಾಗಿದೆ. ಜೀವನ ಉದ್ದಕ್ಕೂ ಮತ್ತು ನಂತರವೂ. ನನ್ನನ್ನು ಕೊಲ್ಲುವುದಕ್ಕಾಗಿ ಯಾರೆಲ್ಲರೂ ನಿನ್ನನ್ನು ಸಿದ್ಧಗೊಳಿಸಿದರೋ ಅವರೆಲ್ಲರೂ ನಿನ್ನ ಸಫಲತೆಯಲ್ಲಿ ಭಾಗಿಯಾಗಲೂ ಮತ್ತು ಯಾವುದೇ ರೀತಿಯ ಸಂಬಂಧವನ್ನಿಟ್ಟುಕೊಳ್ಳಾಗಲೀ ನಿರಾಕರಿಸಿದರು! ಒಂದು ವೇಳೆ ನಿನಗೆ ಸಂಸ್ಥೆಯನ್ನು ಉಳಿಸುವುದಕ್ಕಾಗಿ ತ್ಯಾಗಮಾಡುತ್ತೆಂದು ಅನಿಸುತ್ತಿದ್ದರೆ ಇಂದಿಗೆ ಆ ಘಟನೆ ನಡೆದು ಎಪ್ಪತ್ತು ವರ್ಷಗಳಾದರೂ ಆ ಸಂಘಟನೆಯವರು ನಿನ್ನೊಂದಿಗಿನ ಸಂಬಂಧವನ್ನು ಅಲ್ಲಗೆಳೆಯುತ್ತಿದ್ದಾರೆ. ಇದಕ್ಕೆ ವಿಪರೀತವಾಗಿ ನನ್ನ ಚರಖ ತೆಗೆದುಕೊಂಡು ಪೋಟೋ ತೆಗೆದುಕೊಳ್ಳುತ್ತಿದ್ದಾರೆ ಮತ್ತು ಜಗತ್ತಿನಾದ್ಯಂತ ಭಾಷಣ ಮಾಡುವಾಗ ನನ್ನ ಹೆಸರನ್ನು ಉಲ್ಲೇಖಿಸುತ್ತಾರೆ. ಅವರು ನಿನ್ನನ್ನು ಉಪಯೋಗಿಸಿಕೊಂಡರು. ಆದರೆ ನಿನ್ನನ್ನು ನಿನ್ನ ಹಣೆಯ ಬರಹಕ್ಕೇ ಬಿಟ್ಟಿದ್ದಾರೆ. ನನಗೆ ಇದು ಕೂಡ ಸಹಿಸಲಾಗುವುದಿಲ್ಲವೆಂಬುದನ್ನು ನಂಬು. ಈ ಕಾಲದಲ್ಲಿ ಹುಟ್ಟುವ ಮಕ್ಕಳಿಗೆ ಯಾರೂ "ನಾಥೂರಾಮ್" ಎಂಬ ಹೆಸರಿಡುವುದಿಲ್ಲ, ನೀನು ಇದೆಲ್ಲವನ್ನು ಯಾವ ರೀತಿ ಸಹಿಸಿಕೊಳ್ಳುತ್ತಿಯೆ?

ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯ ಹತ್ಯೆ ಮಾಡಿದಾಗ ಆ ಹತ್ಯೆಯಿಂದ ಜಗತ್ತಿನಲ್ಲಿಯ ಯಾವುದೇ ವಿಚಾರದ ಹತ್ಯೆಯಾಗಿದಿಯೇ? ನಿನ್ನ ಗುಂಡಿನಿಂದ ನನ್ನ ಮೃತ್ಯುವಾಯಿತ್ತಾದರೂ ನನ್ನ ವಿಚಾರದ ಅಂತ್ಯವಾಗಲಿಲ್ಲ! ನನ್ನ ಹತ್ಯೆಯ ಶಿಕ್ಷೆಯ ರೂಪದಲ್ಲಿ ನಿನಗೆ ಗಲ್ಲಿನ ಶಿಕ್ಷೆ ಕೊಡಲಾಯಿತು.ಆದರೂ ನಿನ್ನ ವಿಚಾರ ಇದುವರೆಗೂ ಸ್ಪಷ್ಟವಾಗಿಲ್ಲ. ಯೇಸುವನ್ನು ಶಿಲುಬೆಯ ಮೇಲೆ ಏರಿಸಿದಾಗ ಅವರು ದೇವರಲ್ಲಿ ಕ್ಷಮೆಯಾಚನಾ ಪ್ರಾರ್ಥನೆ ಮಾಡುತ್ತಿದ್ದರು. ಅದೇ ರೀತಿ ನನಗೂ ಕೂಡ ಸ್ವಲ್ಪ ಸಮಯವನ್ನು ನೀನು ಕೊಟ್ಟಿದ್ದರೆ ನಾನು ಸಹ ನಿನ್ನನ್ನು ಕ್ಷಮಿಸಬೇಕೆಂದು ಹೇಳುತ್ತಿದ್ದೆ. "ಈ ಹುಡುಗನಿಗೆ ಪ್ರೇಮಕೊಡು, ಜ್ಞಾನಕೊಡು ಮತ್ತು ನಿನ್ನೊಂದಿಗೆ ಇಟ್ಟುಕೊ. ಇದರಿಂದಾಗಿ ಅವನ ಜೀವನವು ಬದಲಾವಣೆ ಹೊಂದಿ ಅವನ್ನಲ್ಲಾದ ಪೂರ್ಣರೂಪದ ಬದಲಾವಣೆ ನೋಡಿ ಮುಂದಿನ ಪೀಳಿಗೆ ಅವನ ರೀತಿ ದಾರಿ ತಪ್ಪದಿರಲಿ, ತಪ್ಪು ದಾರಿಯಲ್ಲಿ ನಡೆಯದಿರಲಿ", ಎಂದು ವಿನೋಬಾಗೆ ಹೇಳಬಹುದಾಗಿತ್ತು. ಆಗಪಾನ್ಸರೆ, ದಬೋಲಕರ, ಕಲ್ಬುರ್ಗಿ ಅವರ ಮೇಲೆ ಗುಂಡು ಹಾರಿಸುವ ಕೈ ಎಂದೂ ಸಿದ್ಧವಾಗುತ್ತಿರಲಿಲ್ಲ. ನೀನು ಹೇಳಿದ ಆತತಾಯಿ ವಿಚಾರಗಳನ್ನು ನಿನ್ನ ಮೂಲಕವೇ ಹೊಡೆಯುವ ಶಕ್ತಿ ನನ್ನ ವಿಚಾರಗಳಲ್ಲಿ ನಿಶ್ಚಿತವಾಗಿಯೂ ಇದ್ದವು. ಆದರೆ ದುರ್ದೈವದಿಂದ ನಿನಗೆ ಆ ಅವಕಾಶವನ್ನು ಕೊಡುವುದಕ್ಕಾಗಿ ನಾನು ಉಳಿಯಲಿಲ್ಲ.

ನಾಥೂರಾಮ್, ನಿನ್ನ ಸ್ಥಿತಿ ನೋಡಿ ನಿಜವಾಗಿಯೂ ಅತಿಶಯ

ದುಂಖವಾಗುತ್ತದೆ. ಒಂದು ವೇಳೆ ಗಡಿಯಾರದ ಮುಳ್ಳನ್ನು ಹಿಂದಿರುಗಿಸ ಬಹುದಾಗಿದ್ದರೆ ನಾನು ನಿನ್ನನ್ನು ಕೂಡ ನನ್ನೊಂದಿಗೆ ಆಫ್ರಿಕಾ, ಇಂಗ್ಲೆಂಡ್, ಇಡೀ ಭಾರತ ಮತ್ತು ನೌಖಾಲಿಯವರೆಗೆ ಅವಶ್ಯವಾಗಿ ಕರೆದುಕೊಂಡು ಹೋಗುತ್ತಿದ್ದೆ. ಈ ಜಗತ್ತಿನಲ್ಲಿ ತಿರಸ್ಕಾರ ಮತ್ತು ಪ್ರೇಮದ ಮಧ್ಯೆಯಿರುವ ಚಿರಸ್ಥಾಯಿ ದ್ವಂದ್ವವನ್ನು ಪರಿಚಯಿಸಿಕೊಡುತ್ತಿದ್ದೆ. ಪ್ರೇಮ ಮಾಧ್ಯಮದಿಂದ ದೊರೆಯುವ ಆನಂದ ಸುಖ ಮತ್ತು ಶಾಂತಿಗೆ ಮಾನವನಲ್ಲಿರುವ ತಿರಸ್ಕಾರದಾವನಿಲವನ್ನು ಆರಿಸುವ ಶಾಶ್ವತ ಶಕ್ತಿ ಇವೆಯೆಂದು ತೋರಿಸುತ್ತಿದ್ದೆ. ಸಾಧ್ಯವಾಗಿದ್ದರೆ ವಿನೋಬಾ, ನೆಲ್ಸನ್‌ನನ್ನು, ಮಾರ್ಟಿನ್ ಅಂಥವರನ್ನು ನಿನಿಗೆ ಪರಿಚಯಿಸುತ್ತಿದ್ದೆ. ಆದರೆ ಎಲ್ಲವೂ ನಿನ್ನ ಮತ್ತು ನನ್ನ ಕೈಯಿಂದ ಜಾರಿಹೋಗಿದೆ. ನನ್ನ ಅನುಕರಣೆ ಯಾವಗಲೂ ಬಹು ಕಷ್ಟ ನಿನ್ನ ಅನುಕರಣೆ ಸುಲಭ. ಅದು ಎಷ್ಟೊಂದು ಸುಲಭವಾಗಿದೆಯೆಂದರೇ ಆದರ್ಶವನ್ನು ಒಪ್ಪಿಕೊಂಡವರು ಕೂಡ ವಿರೋಧಿಗಳ ಧ್ವನಿಯನ್ನು ಅಡಗಿಸಿಬಿಡುತ್ತಾರೆ.

ನಾಥೂರಾಮಾ ಕಾಲಾಯಾ ತಸ್ಯೈಃನಮಃ

ನಿನ್ನ ಪ್ರೀತಿಯ ಬಾಪೂ,

(ಸಾಭಾರ ಸದ್ಭಾವನಾ ಸಾಧನಾ)

ಅನು ಸು.ಕೌ.

ಪ್ರಾಚೀನ ಕಾಲದಲ್ಲಿ ಭಾರತದಲ್ಲಿ ಸಂತರು ಪಾದಯತ್ರೆ ಮಾಡಿದರು. ಅದರಲ್ಲಿ ಒಂದು ದೃಷ್ಟಿಕೋನವಿತ್ತು. ಅದು ಚಿತ್ತ ನಿರ್ಮಾಣದಾಗಿತ್ತು. ಇಂದೂ ಕೂಡ ಮಾನವನ ಎದುರಿನಲ್ಲಿ ನಿಜವಾದ ಸಮಸ್ಯೆಯಿರುವುದು ಚಿತ್ತ ನಿರ್ಮಾಣದ್ದು. ಚಿತ್ತಕ್ಕೆ ಹೊಸ ಪರಿವೇಶ ಪ್ರಾಪ್ತವಾಗಬೇಕು ಮತ್ತು ಚಿತ್ತವು ವಿಕಾರಗಳಲ್ಲಿ ಹೋಗದೆ ನಿರ್ವಿಕಾರ ಭೂಮಿಕೆಯಲ್ಲಿ ಇರಬೇಕು; ಮತ್ತು ಒಳಗಿನ ಆತ್ಮದಲ್ಲಿರುವ ಶಕ್ತಿಯ ಸ್ತೋತ್ರದ ಸ್ಪರ್ಶ ಆಗಬೇಕು. ಈ ಪ್ರಕಾರ ಚಿತ್ತದ ಮಾದರಿ ನೋಡಲು ಸಿಗುವುದಾದರೆ ಅದು ವಿಶ್ವದಲ್ಲಿ ಹಬ್ಬುವುದು. ಇಂದು ವಿಜ್ಞಾನದ ಶಕ್ತಿ ಬಹಳ ವೇಗದಿಂದ ಬೆಳೆಯುತ್ತಿದೆ. ಆದ್ದರಿಂದ ಜಗತ್ತಿನಲ್ಲಿ ಸಾಮೂಹಿಕ ಚಿತ್ತ ನಿರ್ಮಾಣದ ಅಗತ್ಯವಿದೆ. ಆದ್ದರಿಂದ ಜಗತ್ತಿನ ಚಿಂತಕರು ಪದೇ ಪದೇ ಒಟ್ಟುಗೂಡಿ ಚಿಂತನ–ಮನನ ಮಾಡಬೇಕು.

–ವಿನೋಬಾ

ಅಮೇರಿಕಾಕ್ಕೆ ಸೆಡ್ಡು ಹೊಡೆದ ಧೀರ ಫಿಡೆಲ್ ಕ್ಯಾಸ್ಟ್ರೋ

–ಸನತಕುಮಾರ ಬೆಳಗಲಿ

(ಯಾವುದೇ ಸಾರ್ವಜನಿಕ ಹೋರಾಟಗಾರನಲ್ಲಿ ಇರಬೇಕಾದ ಮೂಲ ಸಾಮರ್ಥ್ಯಗಳು ಫಿಡೆಲ್ ಕ್ಯಾಸ್ಟ್ರೋ ಅವರಲ್ಲಿ ಇದ್ದವು. ಆ ಸಾಮರ್ಥ್ಯದ ಯಶಸ್ಸಿನ ವಿವರಣೆಯ ರೂಪದಲ್ಲಿ ಈ ಲೇಖನವಿದೆ.)

ಕ್ರಾಂತಿಕಾರಿ ಚಳಿವಳಿಯ ಸ್ವರೂಪ ಹೇಗಿರಬೇಕು ಮತ್ತು ಸವಾಲುಗಳನ್ನು ದಿಟ್ಟವಾಗಿ ಎದುರಿಸಿ ಹೇಗೆ ಯಶಸ್ವಿಯಾಗಬೇಕು ಎಂಬುದಕ್ಕೆ ಮಾರ್ಗದರ್ಶನ ನೀಡಿದ್ದು ಅಲ್ಲದೇ ಅದನ್ನು ಬದ್ಧತೆಯಿಂದ ಕಾರ್ಯರೂಪಕ್ಕೆ ತಂದ ಕಮ್ಯುನಿಸ್ಟ್ ನೇತಾರ ಫಿಡೆಲ್ ಕ್ಯಾಸ್ಟ್ರೋರವರು ಹೋರಾಟದ ಬದುಕಿಗೆ ವಿದಾಯ ಹೇಳಿದ್ದಾರೆ. ಜೀವನದ ಕಟ್ಟಕಡೆಯ ಕ್ಷಣದವರೆಗೂ ಚಳಿವಳಿಯನ್ನೇ ಉಸಿರಾಗಿಸಿಕೊಂಡಿದ್ದ ಕ್ಯಾಸ್ಟ್ರೋ ಕಮ್ಯುನಿಸ್ಟ್ ನಾಯಕ ಮಾತ್ರ ಆಗಿರಲಿಲ್ಲ. ಅವರಲ್ಲಿ ಒಬ್ಬ ದೇಶಾಭಿಮಾನಿ, ಅದ್ಭುತ ಚಿಂತಕ, ಜೀವಪರ ಕಾಳಜಿಯುಳ್ಳ ವ್ಯಕ್ತಿ ಕೂಡ ಅಡಗಿದ್ದ. ಸಮಾನತೆಯ ಸಮಾಜದ ನಿರ್ಮಾಣಕ್ಕಾಗಿ ಮಿಡಿಯುವ ಕನಸುಗಾರ ಅಡಗಿದ್ದ. ಇಡೀ ಬದುಕನ್ನು ಸಂಘರ್ಷವನ್ನಾಗಿ ಸ್ವೀಕರಿಸಿದ ಅವರು ಯಾವತ್ತೂ ವಿರಮಿಸಲು ಬಯಲಿಲ್ಲ. ಪ್ರತಿ ಹಂತದಲ್ಲೂ ಹೋರಾಡಿದ ಅವರು ತಮ್ಮ ಅನುಭವ ಮತ್ತು ವಿಚಾರಗಳ ಮೂಲಕ ಕ್ಯೂಬಾ ದೇಶದ ಜನರಿಗೆ ಹೋರಾಟದ ಪಾಠವನ್ನು ಸಹ ಹೇಳಿಕೊಟ್ಟರು. ಎಂತಹದ್ದೇ ಸವಾಲು ಎದುರಾದರೂ ಮಣಿಯಬಾರದು ಎಂಬ ಧ್ಯೇಯವಾಕ್ಯ ನೀಡಿದರು.

ಅಮೆರಿಕ ಎಂಬ ಬಲಾಢ್ಯ ದೇಶವನ್ನು ಎದುರು ಹಾಕಿಕೊಳ್ಳಲು ಬಹುತೇಕ ರಾಷ್ಟ್ರಗಳು ಹಿಂಜರಿಯುತ್ತವೆ. "ಸಮರ ಸಾರುವುದಕ್ಕಿಂತ ರಾಜಿ ಮಾಡಿಕೊಳ್ಳುವುದೇ ಲೇಸು" ಎಂಬ ಧೋರಣೆ ಅನುಸರಿಸುತ್ತವೆ. ಆದರೆ ಅಂತಹ ರಾಷ್ಟ್ರಗಳ ಸಾಲಿನಲ್ಲಿ ಕ್ಯಾಬಾ ಎಂಬ ಪುಟ್ಟ ದೇಶ ನಿಲ್ಲುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ ಕ್ಯಾಸ್ಟ್ರೋ ನುಡಿದಂತೆ ನಡೆದುಕೊಂಡರು. ಜಗತ್ತಿನ ದೊಡ್ಡಣ್ಣನೆಂದೇ ಗುರುತಿಸಿಕೊಳ್ಳುವ ಅಮೆರಿಕ ಎದುರು ಹಾಕಿಕೊಂಡರ ಎಷ್ಟೆಲ್ಲ ಮತ್ತು ಯಾವುದೆಲ್ಲ ದುಷ್ಪರಿಣಾಮಕ್ಕೆ ತುತ್ತಾಗಬಹುದು ಎಂದು ಬೇರೆ ರಾಷ್ಟ್ರದವರು ಕಿವಿಮಾತು ಹೇಳಿದರೂ ಕ್ಯಾಸ್ಟ್ರೊ ಬದಲಾಗಲಿಲ್ಲ. ಅಮೆರಿಕ ದಂಡೆತ್ತಿ ಬರುವ ಬೆದರಿಕೆಯೊಡ್ಡಿದರೂ ಕ್ಯಾಸ್ಟ್ರೊ ದೃತಿಗೆಡಲಿಲ್ಲ. " ಅಮೆರಿಕ ಬಳಿ ಭಾರಿ ಪ್ರಮಾಣದಲ್ಲಿ ಶಸ್ತ್ರಾಸ್ತ್ರ ಮತ್ತು ಸೇನೆಯೂ ಇರಬಹುದು. ಆದರೆ ನಮ್ಮ ದೇಶದಲ್ಲಿ

ಅಪ್ಪಟ ದೇಶಾಭಿಮಾನಿಗಳು ಇದ್ದಾರೆ. ಸ್ವಾಭಿಮಾನ ಮತ್ತು ಸ್ವಾವಲಂಬನೆಯ ತಳಹದಿಯ ಮೇಲೆ ದೇಶ ಕಟ್ಟುವ ಜನರಿದ್ದಾರೆ. ನಮಗ್ಯಾರಿಗೂ ಭಯವಿಲ್ಲ" ಎಂದು ಕ್ಯಾಸ್ಟ್ರೊ ನೇರವಾಗಿ ಉತ್ತರಿಸಿದ್ದರು.

ದೇಶ ಮತ್ತು ಜನರ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಕ್ಯಾಸ್ಟ್ರೊ ಎಂದಿಗೂ ವಿರಮಿಸಲು ಬಯಸಲಿಲ್ಲ. ದೇಶವನ್ನು ಸರ್ವಾಧಿಕಾರಿಯ ಹಿಡಿತದಿಂದ ಮುಕ್ತಗೊಳಿಸುವ ಹೋರಾಟಗಾರನಾಗಿದ್ದಲ್ಲದೆ ಅತ್ಯಂತ ದೀರ್ಘಕಾಲದ ಪ್ರಧಾನಿ ಮತ್ತು ಅಧ್ಯಕ್ಷರಾಗಿ ದೇಶವನ್ನು ಕಟ್ಟಿ ಬೆಳೆಸಿದರು. ಕಮ್ಯೂನಿಸ್ಟ್ ನೀತಿಗಳನ್ನು ಮತ್ತು ಜನಪರ ಯೋಜನೆಗಳನ್ನು ಜಾರಿಗೆ ತಂದ ಅವರು ದೇಶದ ಕಟ್ಟಕಡೆಯ ಮನುಷ್ಯನಿಗೂ ಸಕಲ ಸೌಕರ್ಯ ದೊರಕಿಸುವ ಪ್ರಯತ್ನ ಮಾಡಿದರು. ಆರ್ಥಿಕ ದಿಗ್ಬಂಧನ, ದಾಳಿ ಬೆದರಿಕೆ ಮತ್ತು ಇನ್ನಿತರ ಸಂಕಷ್ಟಗಳನ್ನು ಧೈರ್ಯದಿಂದ ಎದುರಿಸಿದ ಅವರು ಜನ ಬೆಂಬಲದೊಂದಿಗೆ ಕ್ಯೂಬಾವನ್ನು ಸದೃಢ ಮತ್ತು ಸ್ವಾವಲಂಬಿ ದೇಶವಾಗಿಸುವಲ್ಲಿ ಶ್ರಮಿಸಿದರು. ಜನರಿಗೆ ಅಗತ್ಯವಿರುವ ಊಟ, ಬಟ್ಟೆ, ವಸತಿ ಸೌಲಭ್ಯ ಒದಗಿಸುವುದರ ಜೊತೆಗೆ ಭೂಸುಧಾರಣೆ ಯೋಜನೆ ಜಾರಿಗೊಳಿಸಿದರು. ಬಹುತೇಕ ಉದ್ದಿಮೆಗಳನ್ನು ಹೊರಹಾಕಿದರು. ಲಾಭಗಳಿಸುವ ಉದ್ಯಮಗಳು ಇಂತಿಷ್ಟು ಪಾಲನ್ನು ನೌಕರರಿಗೆ ನೀಡಬೇಕು ಎಂಬ ನಿಯಮ ಕೂಡ ರೂಪಿಸಿದರು. ಬಡ ಮತ್ತು ಜನಸಾಮಾನ್ಯರ ಪರಕಾಳಜಿಯಿಟ್ಟುಕೊಂಡೇ ದೇಶದ ಆರ್ಥಿಕ ವ್ಯವಸ್ಥೆಯನ್ನು ಸದೃಢಗೊಳಿಸಿದರು.

ಸಹೋದರ ರೌಲ್ ಕ್ಯಾಸ್ಟ್ರೊ ಮತ್ತು ಕ್ರಾಂತಿಕಾರಿ ಸ್ನೇಹಿತ ಚೆಗುವೇರಾ ಜೊತೆ ಸೇರಿಕೊಂಡು ಗೆರಿಲ್ಲಾ ಯುದ್ಧ ನಡೆಸಿದ್ದ ಕ್ಯಾಸ್ಟ್ರೊ ಕ್ಯೂಬಾ ದೇಶಕ್ಕೆ ಹೊಸ ಜೀವ ನೀಡುವಲ್ಲಿ ಪಟ್ಟ ಶ್ರಮ ಅಷ್ಟಿಷ್ಟಲ್ಲ. ಬ್ಯಾಟಿಸ್ಟಾ ಎಂಬ ಸರ್ವಾಧಿಕಾರಿಯಿಂದ ದೇಶವನ್ನು ಮುಕ್ತಗೊಳಿಸುವುದು ಅಲ್ಲದೇ ಅಮೆರಿಕದ ಕರಿ ನೆರಳಿನಿಂದ ದೇಶವನ್ನು ಪಾರು ಮಾಡುವುದು ಅವರ ಪಾಲಿಗೆ ದೊಡ್ಡ ಸವಾಲಾಗಿತ್ತು. ಹೋರಾಟದ ಹಾದಿಯ ಕೆಲ ಹಂತಗಳಲ್ಲಿ ಅವರು ವಿಫಲರಾದರೂ ಎಂದಿಗೂ ನಿರಾಸೆಗೊಳ್ಳಲಿಲ್ಲ. ಬೇರೆಬೇರೆಮಾರ್ಗ ಅನುಸರಿಸಿದ ಅವರು ಕ್ಯೂಬಾ ದೇಶವನ್ನು ಎಲ್ಲ ರೀತಿಯ ಅಪಾಯಗಳಿಂದ ಪಾರು ಮಾಡಿದ್ದಲ್ಲದೇ ವಿಶ್ವದ ಗಮನ ಸೆಳೆಯುವಂತೆ ಮಾಡಿದರು. "ದೊಡ್ಡ ಗಿಡುಗಿನಂತಹ ಅಮೆರಿಕದ ಎದುರು ಪುಟ್ಟ ಗುಬ್ಬಿಯಂತಹ ಕ್ಯೂಬಾ ದೀರ್ಘಕಾಲದವರೆಗೆ ತನ್ನದೇ ಆದ ಅಸ್ತಿತ್ವ ಕಾಪಾಡಿಕೊಳ್ಳಲು ಆಗುವುದೇ" ಎಂದು ಕೆಲವರು ಕುಹಕವಾಡಿದರು. ಇದಕ್ಕೆ ನಗುತ್ತಲೇ ಪ್ರತಿಕ್ರಿಯಿಸಿದ ಕ್ಯಾಸ್ಟ್ರೊ ತಮ್ಮ ದೇಶದ ಬಗ್ಗೆ ಬೇರೆ ಯಾರೂ ಹಗುರವಾಗಿ ಮಾತನಾಡಲು ಅವಕಾಶ ನೀಡಿಲಿಲ್ಲ. ಎಲ್ಲರೂ ನಿಬ್ಬೆರಗಾಗಿ ಕ್ಯೂಬಾ ದೇಶದ ಸಾಧನೆಯನ್ನು ಶ್ಲಾಘಿಸಿದರು.

೧೯೨೬ರ ಆಗಸ್ಟ್ ೧೩ರಂದು ಶ್ರೀಮಂತ ಭೂಮಾಲೀಕರ ಕುಟುಂಬದಲ್ಲಿ

ಜನಿಸಿದ ಕ್ಯಾಸ್ಟ್ರೋ ಗ್ರಾಮೀಣ ಶಾಲೆಯಲ್ಲೇ ಶಿಕ್ಷಣ ಪೂರೈಸಿ ಹವಾನಾ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪಡೆದರು. ವಿಶ್ವವಿದ್ಯಾಲಯದಲ್ಲಿ ವ್ಯಾಸಾಂಗ ಮಾಡುತ್ತಿರುವಾಗಲೇ ಭ್ರಷ್ಟಾಚಾರದ ವಿರುದ್ಧ ದನಿಯೆತ್ತಿದ ಅವರು ಎಡಪಂಥೀಯ ನಾಯಕರಾಗಿ ಹೊರಹೊಮ್ಮಿದರು. ವಿದ್ಯಾರ್ಥಿದೆಸೆಯಿಂದಲೇ ಹೋರಾಟದ ಬದುಕನ್ನು ನೆಚ್ಚಿಕೊಂಡ ಅವರು ವಿದ್ಯಾರ್ಥಿ ನಾಯಕರಾಗಿ ಲ್ಯಾಟಿನ್ ಅಮೆರಿಕ ಸೇರಿದಂತೆ ಬೇರೆ ಬೇರೆಡೆ ಸಂಚರಿಸಿದರು. ಅಮೆರಿಕದ ಸಾಮ್ರಾಜ್ಯಶಾಹಿ ವಿರುದ್ಧ ಸಮಾವೇಶಗಳನ್ನು ನಡೆಸಿದರು. ಆಯಾ ದೇಶಗಳಲ್ಲಿದ್ದ ಸರ್ವಾಧಿಕಾರದ ವಿರುದ್ಧ ಸಹ ಹೋರಾಟ ರೂಪಿಸಿದರು. ೧೯೫೨ರಲ್ಲಿ ಬ್ಯಾಟಿಸ್ಟಾ ಕ್ಷಿಪ್ರಕ್ರಾಂತೀಯ ನಂತರ ಸಂಘಟನೆಯಲ್ಲಿ ತೊಡಗಿಸಿಕೊಂಡ ಕ್ಯಾಸ್ಟ್ರೋ ಸರ್ವಾಧಿಕಾರಿ ಬ್ಯಾಟಿಸ್ಟಾ ವಿರುದ್ಧ ಸಶಸ್ತ್ರ ದಂಗೆಗೆ ಕಾರಣರಾದರು. ಆದರೆ ಅವರು ಅದರಲ್ಲಿ ನಿರೀಕ್ಷಿತ ಮಟ್ಟದಲ್ಲಿ ಯಶಸ್ಸು ಗಳಿಸಲು ಸಾಧ್ಯವಾಗಲಿಲ್ಲ. ಇದರಿಂದ ಅವರು ಜೈಲು ಶಿಕ್ಷೆ ಅನುಭವಿಸಿ, ನಂತರ ಬಿಡುಗಡೆಯಾದರು. ೧೯೫೫ ರಲ್ಲಿ ಮೆಕ್ಸಿಕೋಗೆ ತೆರಳಿದ ಕ್ಯಾಸ್ಟ್ರೋ ಕ್ಯೂಬಾದತ್ತ ಗೆರಿಲ್ಲಾ ದಂಡೆಯಾತ್ರೆ ಕೈಗೊಂಡರು. ಸಶಸ್ತ್ರ ದಂಗೆಗೆ ಸಿದ್ಧತೆ ನಡೆಸಿದರು. ಅತ್ಯಂತ ವ್ಯವಸ್ಥಿತ ಮತ್ತು ಯೋಜನಾಬದ್ಧವಾಗಿ ದಂಗೆ ಕೈಗೊಂಡ ಅವರು ಬ್ಯಾಟಿಸ್ಟಾನನ್ನು ಕ್ಯೂಬಾದಿಂದ ಹೊರಹಾಕುವಲ್ಲಿ ಯಶಸ್ವಿಯಾದರು.

೧೯೫೯ರಿಂದ ೧೯೭೬ರವರೆಗೆ ದೇಶದ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ಕ್ಯಾಸ್ಟ್ರೋ ೧೯೭೬ ರಿಂದ ೨೦೦೮ರವರೆಗೆ ರಾಷ್ಟ್ರದ ಅಧ್ಯಕ್ಷರಾಗಿಯೂ ಜವಾಬ್ದಾರಿ ವಹಿಸಿಕೊಂಡರು. ಅನಾರೋಗ್ಯದ ಹಿನ್ನಲೆಯಲ್ಲಿ ೨೦೦೮ರಲ್ಲಿ ಅವರು ಅಧಿಕಾರ ತ್ಯಜಿಸಿದರೆ ಹೊರತು ಅವರಲ್ಲಿನ ಹೋರಾಟದ ಭಾವನೆ ಕುಂದಿರಲಿಲ್ಲ.

ಕ್ಯಾಸ್ಟ್ರೋ ಮತ್ತು ಚೆಗುವೇರ ನಡುವೆ ಆಪ್ತಸ್ನೇಹವಿತ್ತು. ಯಾವುದೇ ಹೋರಾಟ ನಡೆಸಬೇಕಿದ್ದರೂ ಅವರು ಪರಸ್ಪರ ಚರ್ಚಿಸುತ್ತಿದ್ದರು. ಅವರ ಆಪ್ತತೆ, ಬದ್ಧತೆ ಮತ್ತು ಹೋರಾಟದ ಮನೋಭಾವ ಎಂತಹದ್ದು ಎಂಬುದಕ್ಕೆ ಈ ಕೆಳಗೆ ಕಾಣಿಸಿದ ಪತ್ರವೇ ಸಾಕ್ಷಿ. " ನಿಮ್ಮೊಂದಿಗೆ ಶ್ರದ್ಧೆ, ಪ್ರಾಮಾಣಿಕತೆ ಮತ್ತು ಅರ್ಪಣಾ ಮನೋಭಾವದಿಂದ ಹೋರಾಟ ನಡೆಸಿದ್ದು ನನಗೆ ಹೆಮ್ಮೆಯ ಸಂಗತಿ. ನಿಮ್ಮೊಳಗಿನ ಕ್ರಾಂತಿಕಾರಿ ನಾಯಕತ್ವದ ಗುಣಲಕ್ಷಣಗಳನ್ನು ಅರಿಯುವಲ್ಲಿ ಕೊಂಚ ತಡವಾಯಿತು. ನಿಮ್ಮ ಆಲೋಚನಾ ಲಹರಿಯೊಂದಿಗೆ ಗುರುತಿಸಿ ಕೊಂಡಿದ್ದು ಅಲ್ಲದೇ ಅಪಾಯ, ತತ್ವಗಳನ್ನು ನಿಮ್ಮಂತೆಯೇ ಗ್ರಹಿಸಿದ್ದನ್ನು ಹೆಮ್ಮೆಯಿಂದ ನೆನೆಯುತ್ತೇನೆ. ಕ್ಯೂಬಾ ದೇಶದ ನಾಯಕತ್ವ ಜವಾಬ್ದಾರಿ ನಿಮ್ಮದ್ದು. ನಾನಿನ್ನೂ ಹೊರಡುತ್ತೇವೆ.

ಕ್ಯಾಸ್ಟ್ರೋ ಅವರನ್ನು ಇನ್ನಷ್ಟು ಸರಳವಾಗಿ ಮತ್ತು ಆಪ್ತವಾಗಿ ಅರಿಯಲು ಈ ಪತ್ರವೊಂದೇ ಸಾಕು. ಕ್ಯಾಸ್ಟ್ರೋ ಅವರನ್ನು ಹತ್ತು ಹಲವು ರೀತಿಯಲ್ಲಿ ವರ್ಣಿಸಬಹುದು. ಆದರೆ ಅವರ ಜೀವಿತಾವಧಿಯ ಹೋರಾಟದ ಕಾಲಘಟ್ಟ

ಮತ್ತು ಬದುಕಿದ ರೀತಿಯನ್ನು ವರ್ಣಿಸಲು ಪದಗಳ ಕೊರತೆ ಕಾಡಬಹುದು.

ದೇಶಭಕ್ತಿ ಮತ್ತು ತ್ಯಾಗ ಮನೋಭಾವದ ಕುರಿತು ಪ್ರಶ್ನೆಗಳು ವ್ಯಕ್ತವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಕ್ಯಾಸ್ಟ್ರೊ ಹೆಚ್ಚು ಪ್ರಸ್ತುತವಾಗುತ್ತಾರೆ. ದೇಶಕ್ಕಾಗಿ ಯಾರೇನು ಮಾಡಿದರು ಅಥವಾ ಕೊಟ್ಟರು ಎಂದು ಪ್ರಶ್ನಿಸುವ ಬದಲು ಸ್ವತಃ ಕ್ಯಾಸ್ಟ್ರೊ ತಾನೇನೂ ಮಾಡಿದೆಯೆಂದು ಸಾದರಪಡಿಸಿದರು. ಮಾತುಗಳಿಗಿಂತ ಕೃತಿಯಲ್ಲೇ ಹೆಚ್ಚು ನಂಬಿಕೆ ಹೊಂದಿದ್ದರು, ಅದರಂತೆ ನಡೆದುಕೊಂಡರು. ದೇಶದ ಜನರ ವಿಶ್ವಾಸವನ್ನೂ ಗಳಿಸಿದರು.

ಕ್ರಾಂತಿಯಿಂದ ಮಾತ್ರವೇ ಸಾಮಾಜಿಕ ಬದಲಾವಣೆ ಸಾಧ್ಯ ಎಂಬುದನ್ನು ಮನದಟ್ಟು ಮಾಡಿಕೊಂಡ ಕ್ಯಾಸ್ಟ್ರೊ ತಮ್ಮ ೯೦ ನೇ ಇಳಿವಯಸ್ಸಿನಲ್ಲೂ ರಾಜಿ ಮಾಡಿಕೊಳ್ಳಲಿಲ್ಲ. ಅಮೆರಿಕ ಎಷ್ಟೇ ನಿರ್ಬಂಧ ಹೇರಿದರೂ, ಬೆದರಿಕೆ ಒಡ್ಡಿದರೂ ಬೃಹತ್ ಪರ್ವತದಂತೆ ಅಲುಗಾಡಿಸಲಾಗದ ಬಂಡೆಯಂತೆ ಕ್ಯೂಬಾ ದೇಶವನ್ನು ನಿಲ್ಲಿಸಿದರು. ದೇಶಕ್ಕಾಗಿ ಇಡೀ ಜೀವನವನ್ನು ಸಮರ್ಪಿಸಿದ ಅವರು ತಮ್ಮ ಮೊಗದಲ್ಲಿ ಎಂದಿಗೂ ದಣಿವೂ ತೋರಿಸಿಕೊಡಲಿಲ್ಲ.

ಆಪ್ತಸ್ನೇಹಿತ ಚೆಗುವೀರ ಜೊತೆ ಸಿಗಾರ್ ಸೇದುವುದರಲ್ಲಿ ಹೆಚ್ಚು ಸಂತಸಪಡುತ್ತಿದ್ದ ಕ್ಯಾಸ್ಟ್ರೊ ತಮ್ಮ ಬದುಕಿನ ಪ್ರತಿ ಕ್ಷಣವನ್ನು ಸವಾಲಾಗಿ ಸ್ವೀಕರಿಸಿದರು. ಅರ್ಥಾತ ಅವರಲ್ಲಿನ ಅದಮ್ಯ ಆತ್ಮವಿಶ್ವಾಸ ಮತ್ತು ಆತ್ಮಬಲ ಯಾವಾಗಲೂ ಸ್ಫೂರ್ತಿ ನೀಡಿದವು. ಕೈಯಲ್ಲಿ ಕೆಂಬಾವುಟ, ತಲೆಗೊಂದು ಕ್ಯಾಪ್, ಮೈಮೇಲೆ ಯೋಧನ ದಿರಿಸು, ಬಾಯಿಯಲ್ಲಿ ಸಿಗಾರ್ ಮತ್ತು ಸದಾ ಆಶಾಭಾವನೆಯಿಂದ ಕಂಗೊಳಿಸುವ ಕಂಗಳಲ್ಲಿ ಕಾಣಿಸಿಕ್ಕವರು ಕ್ಯಾಸ್ಟ್ರೊ .

ಕ್ಯಾಸ್ಟ್ರೊ ಅವರನ್ನು ಸಂಪೂರ್ಣವಾಗಿ ದಮನ ಮಾಡಲು ನಡೆದ ಪ್ರಯತ್ನಗಳು ಅಷ್ಟಿಷ್ಟಲ್ಲ. ಸುಮಾರು ೯೦ಕ್ಕೂ ಹೆಚ್ಚುಬಾರಿ ಅವರ ಮೇಲೆ ದಾಳಿ ನಡೆಸಿ, ಪ್ರಾಣ ಕಸಿದುಕೊಳ್ಳುವ ಯತ್ನ ನಡೆಯಿತು. ಆಹಾರದಲ್ಲಿ ವಿಷ ಹಾಕುವ, ಗುಂಡಿನ ದಾಳಿ ನಡೆಸುವ ಪ್ರಯತ್ನವೂ ನಡೆಯಿತು. ಆದರೆ ಪ್ರತಿ ಸಂದರ್ಭದಲ್ಲೂ ಫೀನಿಕ್ಸ್ ಪಕ್ಷಿಯಂತೆ ಮತ್ತೆ ಹುಟ್ಟಿ ಬಂದ ಕ್ಯಾಸ್ಟ್ರೊ ಮತ್ತೆ ಎಂದಿನಂತೆ ಸವಾಲು ಒಡ್ಡುವುದರಲ್ಲಿ ಖುಷಿ ಅನುಭವಿಸಿದರು. ಕ್ರಾಂತಿಕಾರಿ ಹೇಗೆ ಬದುಕಬೇಕು ಎಂಬುದನ್ನು ನೇರವಾಗಿ ಅವರು ಯಾವತ್ತೂ ಹೇಳಲಿಲ್ಲ. ಆದರೆ ಅದನ್ನು ಹೇಳದೇನೆ ಅಕ್ಷರಶಃ ಬದುಕಿ ತೋರಿಸಿದರು.

ಅಮೆರಿಕದಲ್ಲಿ ಅಲ್ಲದೇ ಜಾಗತಿಕವಾಗಿ ಹಲವಾರು ಅಪಾಯ ಮತ್ತು ಆಘಾತಕಾರಿ ಬದಲಾವಣೆಗಳು ಆಗುತ್ತಿರುವ ಇಂದಿನ ಸಂದರ್ಭದಲ್ಲಿ ಕ್ಯಾಸ್ಟ್ರೊ ಇರಬೇಕಿತ್ತು. ಇಂದಿನ ಯುವಪೀಳಿಗೆಗೆ ಮಾರ್ಗದರ್ಶನ ನೀಡಬೇಕಿತ್ತು . ಲಾಲ್ ಸಲಾಂ ಕಾಮ್ರೇಡ್ ಕ್ಯಾಸ್ಟ್ರೊ.

(ಸಂವಾದ ಸಾಭಾರ)

ಸರ್ವೋದಯ ಆಂದೋಲನ ಮುನ್ನಡೆ

೨೨/೦೧/೨೦೧೭ ಭಾನುವಾರ ಜನಪದ ಸೇವಾಟ್ರಸ್ಟ್ ಮೇಲುಕೋಟೆಯ ಆವರಣದಲ್ಲಿ ಸರ್ವೋದಯ ಸಮಾಜ ಸಮ್ಮೇಳನ ಯಶಸ್ಸಿನ ಸವಿನೆನಪಿನಲ್ಲಿ ನಡೆದ ಸಂತೋಷ ಕೂಟ ಮತ್ತು ಆತ್ಮಾವಲೋಕನದ ಸಭೆಯಲ್ಲಿ ಮಂಡಿಸಿದ ವಿಚಾರಗಳು.

ಸರ್ವೋದಯ ಸಮಾಜ ಸಮ್ಮೇಳನದ ಯಶಸ್ಸಿಗಾಗಿ ಕೆಲಸ ಮಾಡಿದ ಎಲ್ಲಾ ಸರ್ವೋದಯ ವಿಚಾರ ಪ್ರೇಮಿಗಳಿಗೂ ಮತ್ತು ಉದಾರವಾಗಿ ಧನ, ಧಾನ್ಯಗಳ ಮೂಲಕ ಸಹಾಯ ಮಾಡಿದ ಉದಾರಿಗಳಿಗೂ ಕರ್ನಾಟಕ ಸರ್ವೋದಯ ಮಂಡಲದ ಹಾರ್ಧಿಕ ಕೃತಜ್ಞತೆಗಳು. ಸಮ್ಮೇಳನಕ್ಕಾಗಿ ಸ್ಥಳಾವಕಾಶ ಮಾಡಿಕೊಟ್ಟ ಶ್ರೀ ಆದಿಚುಂಚನಗಿರಿ ಮಠದವರಿಗೂ ವಿಶೇಷ ಕೃತಜ್ಞತೆಗಳು.

ಸಮ್ಮೇಳನವು ಕರ್ನಾಟಕ ರಾಜ್ಯ ಮಟ್ಟದ್ದಾಗಿದ್ದರೂ ರಾಜ್ಯದ ಎಲ್ಲ ಜಿಲ್ಲೆಗಳಿಂದ ಪ್ರತಿನಿಧಿಗಳು ಬರುವಂತೆ ಮಾಡಲು ಸಾಧ್ಯವಾಗದೇ ಇದ್ದುದು ವಿಷಾದದ ಸಂಗತಿ. ಇದಕ್ಕೆ ಕಾರಣ ಸಮ್ಮೇಳನಕ್ಕೆ ಮೊದಲು ಎಲ್ಲಾ ಜಿಲ್ಲೆಗಳಿಗೆ ಭೇಟಿಕೊಟ್ಟು ಅಲ್ಲಿಯ ಸಹೃದಯದವರಿಗೆ ಸಮ್ಮೇಳನ ಅವಶ್ಯಕತೆಯನ್ನು ಮನದಟ್ಟುಮಾಡಿಕೊಡುವುದಕ್ಕೆ ಸಾಧ್ಯವಾಗದೇ ಇದ್ದುದು. ಸಮ್ಮೇಳನವನ್ನು ಮಾಡಬೇಕೆಂದು ನಿಶ್ಚಿಯಿಸಿದ ಮೇಲೆ ಸಾಕಷ್ಟು ಕಾಲಾವಕಾಶವಿದ್ದರೂ ಸಮ್ಮೆಳನದ ಕ್ಷೇತ್ರ ಪ್ರಚಾರಕ್ಕೆ ಸಮಯ ಕೊಡದೇ ಇದ್ದುದು ನಮ್ಮ ಸಂಘಟನೆಯ ದೌರ್ಬಲ್ಯವನ್ನು ತೋರಿಸುತ್ತದೆ. ಜನರಿಗೆ ಸರ್ವೋದಯ ವಿಚಾರದಲ್ಲಿ ಆಸಕ್ತಿ ಇದೆ. ಪರಿಯಾಯ ಸಮಾಜ ವ್ಯವಸ್ಥೆಯನ್ನು ಜನರು ಬಯಸುತ್ತಾರೆ. ಜನರಲ್ಲಿರುವ ಆಸಕ್ತಿಯ ಲಾಭವನ್ನು ಸಂಘಟನೆಯ ದೌರ್ಬಲ್ಯದ ಕಾರಣದಿಂದಾಗಿ ಪಡೆಯಲು ಸಾಧ್ಯವಾಗಲಿಲಲ್ಲ. ಸಮ್ಮೆಳನಕ್ಕೆ ಇನ್ನು ಹೆಚ್ಚು ಜನ ಬರದೇ ಇದ್ದುದಕ್ಕೆ ಇದೇ ಕಾರಣ.

ಸಮ್ಮೇಳನದ ಆಹ್ವಾನ ಪತ್ರಿಕೆಯನ್ನು ತಯಾರಿಸುವಲ್ಲಿ ಆತುರವಾಯಿತು. ಇನ್ನು ಹೆಚ್ಚು ಸಮರ್ಪಕವಾಗಿ ಪ್ರಕಟಿಸಬಹುದಾಗಿತ್ತು. ಎರಡು ಪ್ರಕಾರದ ಆಹ್ವಾನ ಪತ್ರಿಕಗಳ ಮುದ್ರಣದ ಅಗತ್ಯವಿಲ್ಲದೆಂದಿನಿಸುತ್ತದೆ. ಆಹ್ವಾನ ಪತ್ರಿಕೆ ಮುದ್ರಿಸುವ ಮೊದಲು ಸಂಬಂಧಿಸಿದವರು ಒಂದೆಡೆ ಕುಳಿತು ಸಮಾಲೋಚನೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ದೂರವಾಣಿಯ ಮೂಲಕವೇ ವಿಚಾರ ವಿನಿಮಯ ನಡೆದರಿಂದ ಸ್ಪಷ್ಟತೆಯ ಕೊರತೆ ಆಯಿತು.

ಸಮ್ಮೇಳನದಲ್ಲಿ ಪ್ರಚಲಿತ ಜ್ವಲಂತ ವಿಷಯದ ಬಗ್ಗೆ ಸರ್ವೋದಯ ವಿಚಾರಧಾರಿತ ಯಾವುದೇ ಠರಾವನ್ನು ಅಂಗೀಕರಿಸಲು ಸಾಧ್ಯವಾಗದೇ ಹೋದುದು ದೊಡ್ಡ ಲೋಪವೆನಿಸುತ್ತದೆ.

ಕರ್ನಾಟಕ ಸರ್ವೋದಯ ಮಂಡಳಿಯನ್ನು ಬಲಪಡಿಸುವ ದೃಷ್ಟಿಯಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸರ್ವೋದಯ ಮಂಡಳಿಗಳನ್ನು ಪ್ರಸ್ಥಾಪಿಸುವ ಬಗ್ಗೆ ವಿಚಾರ ಮಂಡಿಸಲು ಮತ್ತು ತೀರ್ಮಾನಿಸಲು ಸಾಧ್ಯವಾಗದೇ ಇದ್ದುದು ಎರಡನೇಯ ಲೋಪ.

ಸಮ್ಮೇಳನದಿಂದ ಪ್ರಭಾವಿತರಾಗಿ ಬೇರೆ ಜಿಲ್ಲೆಯಲ್ಲಿ ಸರ್ವೋದಯ ಸಮಾಜ ಸಮ್ಮೇಳನವನ್ನು ನಡೆಸಲು ಕೆಲವು ಸರ್ವೋದಯ ಮಿತ್ರರು ಮುಂದೆ ಬಂದಿರುವುದು ಒಂದು ಒಳ್ಳೆಯ ಬೆಳವಣಿಗೆ ಮುಂದಿನ ವರ್ಷ ತುಮಕೂರು ಜಿಲ್ಲೆಯ ಮಿತ್ರರು ಸಮ್ಮೇಳನ ನಡೆಸಲು ಮುಂದೆ ಬಂದಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಮಿತ್ರರು ಮುಂದಿನ ತಿಂಗಳು ಮಂಗಳೂರು ನಗರದ ಮಟ್ಟಿಗೆ ಸರ್ವೋದಯ ಚಿಂತನ ಸಮಾವೇಶವನ್ನು ಆಯೋಜಿಸಿರುವುದು ಕೂಡ ಸಂತೋಷದ ಬೆಳವಣಿಗೆ.

ಸಮ್ಮೇಳನ ಹಣಕಾಸಿನ ಮಾಹಿತಿಯನ್ನು ಸಂಘಟನಾ ಕಾರ್ಯದರ್ಶಿ ಶ್ರೀ ಎಚ್.ಎಸ್. ಸುರೇಶ್ ರವರು ಮಂಡಿಸುತ್ತಾರೆ.

ಕರ್ನಾಟಕ ಸರ್ವೋದಯ ಮಂಡಳಿಯ ನೊಂದಾಯಿತ ನಿಯಾಮವಳಿಗಳ ಪ್ರಕಾರ ಮಂಡಳಿಯ ಅಧ್ಯಕ್ಷತೆ ಎರಡು ವರ್ಷ ಮಾತ್ರ. ಸದ್ಯದ ಅಧ್ಯಕ್ಷರು ಆರು ವರ್ಷಗಳು ಮುಗಿಸಿ ಏಳನೇ ವರ್ಷದಲ್ಲಿ ಮುಂದುವರೆಯುತ್ತಿದ್ದಾರೆ. ಆದ್ದರಿಂದ ಬದಲಾವಣೆ ತರುವುದು ಜರೂರಾಗಿದೆ. ಅದು ಶ್ರೀಘ್ರವು ಆಗಬೇಕಿದೆ. ಆದ್ದರಿಂದ ಅಧ್ಯಕ್ಷರ ಆಯ್ಕೆಯ ಕೆಲಸವನ್ನು ಸರ್ವೋದಯ ಸಮಾಜ ಸಮ್ಮೇಳನದಲ್ಲಿ ಮಾಡಬೇಕೆಂಬ ಇಚ್ಛೆಯಿತ್ತಾದರು, ಸಮಯಾಭಾವದಿಂದ ಸಾಧ್ಯವಾಗದೇ ಹೋಯಿತು. ಆದ್ದರಿಂದ ಈಗ ಇರುವ ಸರ್ವೋದಯ ಮಿತ್ರರು, ಲೋಕಸೇವಕರು ಹಾಗೂ ಅಭಿಮಾನಿಗಳು ವಿಶೇಷ ಸಭೆಯನ್ನು ಕರೆದು ಅಧ್ಯಕ್ಷರ ಆಯ್ಕೆಯ ಪ್ರಕ್ರಿಯೆ ನಡೆಯಬೇಕೆಂದು ಬಯಸುತ್ತೇನೆ. ಅಂಥ ಸಭೆಯ ದಿನಾಂಕ ಮತ್ತು ಸ್ಥಳವನ್ನು ಈ ಸಭೆ ತೀರ್ಮಾನಿಸಬೇಕೆಂದೂ ಕೋರುತ್ತೇವೆ.

***

ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲಾ ಮಂಡಳಿಗಳ ಕಾರ್ಯ ವರದಿ

ಮೇಲ್ಕಾಣಿಸಿದ ಜಿಲ್ಲಾ ಸರ್ವೋದಯ ಮಿತ್ರ ಮಂಡಳಿಗಳು ಕಳೆದ ಜನವರಿ ೨೬ ರಂದು ಮಂಗಳೂರಿನಲ್ಲಿ ನಡೆದ ಗಣರಾಜ್ಯೋತ್ಸವದ ಜೊತೆಗೆ ಜಿಲ್ಲಾ ಮಟ್ಟದ "ಸರ್ವೋದಯ ಸಮಾಜ ವಿಚಾರ" ಸಂಕೀರ್ಣದಲ್ಲಿ ಸರ್ವೋದಯ–ಪ್ರಜಾಪ್ರಭುತ್ವ–ಯುವಜನತೆ ಎಂಬ ವಿಷಯವಾಘಿ ವಿಚಾರ ವಿನಿಮಯ ನಡೆಯಿತು. ದಕ್ಷಿಣಕನ್ನಡ ಸರ್ವೋದಯ ಮಂಡಲ ಕಾರ್ಯಕರ್ತರಾದ ಆರೂರು ಮಂಜುನಾಥ ಮಾತನಾಡಿ, ಪ್ರಸ್ತುತ ಸ್ಥಿತಿಯಲ್ಲಿ ಯುವಜನತೆ ಇಂತ ವಿಚಾರ ಸಂಕೀರ್ಣಗಳು ಬಹಳ ಅಗತ್ಯವಾದವು.

ಆಧುನಿಕತೆಯೇ ಬದುಕು ಎಂದು ತಪ್ಪಾಗಿ ಅರ್ಥೈಸಿ ಅದರ ಹಿಂದೆ ಓಡಾಡುವ ಜನರಿಗೆ ಬದುಕುವ ದಾರಿ ಗೊತ್ತಾಗಿಲ್ಲ. ಪಠ್ಯಪುಸ್ತಕಗಳ ಮೂಲಕ ವಿದ್ಯಾರ್ಥಿಗಳಿಗೆ ಸರ್ವೋದಯ ವಿಚಾರ ತಿಳಿಸಬೇಕು. ಆಗ ಸರ್ವೋದಯ ಸಮಾಜ ನಿರ್ಮಾಣಕ್ಕೆ ಯುವಕರ ಸಹಕಾರ ಸಾಧ್ಯವಾಗುತ್ತದೆ ಎಂದಯ ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಹರಿಕೃಷ್ಣ ಪುನರೂರು ಮಾತನಾಡಿ ಸರ್ವಸ್ವಾತಂತ್ರ್ಯದ ದುರುಪಯೋಗವಾಗದಿರಲಿ ಎಂದರು. ಹಿರಿಯ ಸರ್ವೋದಯ ಸೇವಕರಾದ ನಾಮದೇವ್ ಶೆಣೈರವರು ಮಾತನಾಡಿ ಎಲ್ಲರನ್ನೂ ಉನ್ನತಿಕರಿಸುವ ಸರ್ವೋದಯ ತತ್ತವನ್ನು ಜೀವನದಲ್ಲಿ ಯುವಕರು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಈ ವಿಚಾರ ಸಂಕೀರ್ಣದಲ್ಲಿ ಸುಮಾರು ಇನ್ನೂರು ಯುವಕರು ಮತ್ತು ವಿದ್ಯೆಆರ್ಥಿಗಳು ಭಾಗವಹಿಸಿದ್ದರು. ರಾಜ್ಯ ಸರ್ವೋದಯ ಮಂಡಳಿಯ ಕಾರ್ಯದರ್ಶಿ ನರಸಿಂಹಯ್ಯನವರು, ಸಂಘಟನಾ ಕಾರ್ಯದರ್ಶಿ ಎಚ್. ಎಸ್. ಸುರೇಶ್ ರವರು ಭಾಗವಹಿಸಿದ್ದರು. ವಿಚಾಋ ಸಂಕೀರ್ಣವನ್ನು ಆಯೋಜಿಸಲು ಕಾಫೂವಿನ ವದ್ಯಾನಿಕೇತನ ಸಮೂಹ ಸಂಸ್ಥೆಯು ತುಂಬಾ ಸಹಕರಿಸಿತು.

ಸರ್ವೋದಯ ಸಮಾಜ ಸಮ್ಮೇಳನದ ಜಮಾ ಖರ್ಚು ವಿವರ

ದಿನಾಂಕ:- ೨೩/೦೧/೨೦೧೭

ದಾನಿಗಳು

ಶ್ರೀ ಎಂ. ಚಂದ್ರಶೇಖರ್ ಫೌಂಡೇಶನ್	೫೦,೦೦೦-೦೦
ಪಿ. ಇ. ಎಸ್ ಎದುಕೇಶನ್ ಸೊಸೈಟಿ ಮಂಡ್ಯ	೨೫,೦೦೦-೦೦
ಶ್ರೀ ಎಚ್. ಡಿ. ಚೌಡಯ್ಯ	೧೦,೦೦೦-೦೦
ಶ್ರೀಮತಿ ಮೀರಾ ಶಿವಲಿಂಗಯ್ಯ	೧೦,೦೦೦-೦೦
ಹೋಟೆಲ್ ಹರಿಪ್ರಿಯ ಮಂಡ್ಯ	೧೦,೦೦೦-೦೦
ಸಿದ್ದಾರ್ಥ ಚಿತ್ರಮಂದಿರ ಮಂಡ್ಯ	೧೦,೦೦೦-೦೦
ಸರ್ವೋದಯ ಶ್ರೀರಂಗಪಟ್ನ	೧೫,೦೦೦-೦೦
ಧೀನಬಂಧು ಟ್ರಸ್ಟ್ ಚಾಮರಾಜನಗರ	೧೦,೦೦೦-೦೦
ಸರ್ವೋದಯ ಮಿತ್ರ ಮಂಡಲ ಮಂಡ್ಯ(ಹೆಚ್. ಎಸ್.ಎಸ್.)	೧೦,೦೦೦-೦೦
ಜಿ. ನಂಜೆ ಗೌಡ ಮಂಡ್ಯ	೦೫,೦೦೦-೦೦
ಶ್ರೀ ವೆಂಕಟೇಶ್ ಬಾಬು ಮಂಡ್ಯ	೦೨,೦೦೦-೦೦
ಶ್ರೀ ಶಿವಲೀಲಾ ಎಂಟರ್‌ಪ್ರೈಸಸ್ ಮಂಡ್ಯ	೦೫,೦೦೦-೦೦
ಮೈಸೂರು ಸರ್ವೋದಯ ಮಿತ್ರ ಮಂಡಲ	೦೬,೦೦೦-೦೦
ಚಿತ್ರದುರ್ಗ ಸರ್ವೋದಯ ಮಿತ್ರಮಂಡಲ	೦೫,೦೦೦-೦೦

ಧಾರವಾಡ ಸರ್ವೋದಯ ಮಿತ್ರ ಮಂಡಲ	೦೫,೦೦೦-೦೦
ಹಾಸನ ಸರ್ವೋದಯಮಿತ್ರ ಮಂಡಲ	೦೫,೦೦೦-೦೦
ಚಾಮರಾಜನಗರ ಸರ್ವೋದಯ ಮಿತ್ರ ಮಂಡಲ	೧೨,೦೦೦-೦೦
ದಕ್ಷಿಣಕನ್ನಡ ಮತ್ತು ಮಂಗಳೂರು ಸರ್ವೋದಯ ಮಿತ್ರ ಮಂಡಲ	೧೪,೧೦೦-೦೦
ಶ್ರೀ ರಮೇಶ್ ಮರಡಿಹಳ್ಳಿ	೦೫,೦೦೦-೦೦
ಶ್ರೀ ಮಂಜುನಾಥ ಪಾಂಡುವಪುರ	೦೫,೦೦೦-೦೦
ಶ್ರೀ ಶಿವಣ್ಣ ಪಿರಿಯಾಪಟ್ನ	೦೫,೦೦೦-೦೦
ಶ್ರೀ ವೆಂಕಟೇಶ ಯೋಗ ಟೀಚರ್	೦೪,೦೦೦-೦೦
ಶ್ರೀ ಎಂ, ಪುಟ್ಟಣ್ಣಯ್ಯ ಮೇಲುಕೋಟೆ	೦೨,೦೦೦-೦೦
ಶ್ರೀಮತಿ ಲಕ್ಷೀ ಸತ್ಯಾವ್ರತ	೦೨,೦೦೦-೦೦
ಶ್ರೀಮತಿ ಗಿರಿಜ ಹೆಗಡೆ	೦೨,೦೦೦-೦೦
ಮಂಗಳೂರು ವಿಜಯ	೦೧,೦೦೦-೦೦
ವೆಂಕಟರಮಣ ಗೌಡ	೦೧,೦೦೦-೦೦
ಸತ್ಯನಾರಾಯಣ	೧,೫೦೦-೦೦
ಶ್ರೀ ನರಸಿಂಹಯ್ಯ	೧,೦೦೦-೦೦
ಶ್ರೀ ಕೆ.ಜಿ. ಕುಲಕರ್ಣಿ	೦೫೦೦-೦೦
ಶ್ರೀ ಪಂಪಣ್ಣ	೦೩೦೦-೦೦
ಶ್ರೀ ಕರಗಂ ಮೇಲುಕೋಟೆ	೦೩೦೦-೦೦
ಡಾ॥ ಕಾಳಚನ್ನೆಗೌಡ್ರು	೧,೦೦೦-೦೦
ಶ್ರೀ ನಾರಾಯಣ ಭಟ್ರು	೧,೦೦೦-೦೦
ಮಂಡ್ಯ ಸರ್ವೋದಯ ಮಿತ್ರ ಮಂಡಲ	೨೫,೦೦೦-೦೦
ವಿಠ್ಠಲ್ ಮೂಲಕ ಬಳ್ಳಾರಿ ಮಿತ್ರರಿಂದ	೮,೦೦೦-೦೦
ಒಟ್ಟು ಜಮಾ	೨,೭೪,೭೦೦-೦೦
ಒಟ್ಟು ಖರ್ಚು	೨,೩೦,೨೨೧
ಒಟ್ಟು ಉಳಿಕೆ	೪೪,೪೭೯

ವಿವರಗಳಿಗಾಗಿ ಸಂಪರ್ಕಿಸಿ

ಶ್ರೀ ಎಲ್. ನರಸಿಹಯ್ಯ - ೯೮೮೦೮೮೭೧೯೪

ಎಚ್. ಎಸ್. ಸುರೇಶ್ - ೯೪೪೮೦೨೭೪೦೦

ಸನ್ಮಾನ್ಯರಿಂದ...

ಮೋದಿಯುವರು ಈಗ ಚರಕದ ಜೊತೆ ತಮ್ಮ ಸಂಬಂಧವನ್ನು ಸ್ಥಾಪಿಸಿಕೊಳ್ಳಲು ಹೊರಟಿರುವುದು ಅಸಹಜವೂ, ಅಸಂಬದ್ಧವೂ, ಅಪವಿತ್ರವೂ ಮತ್ತು ದುರುದ್ದೇಶಪೂರ್ವಕವೂ ಆದ ಪ್ರಯತ್ನವಾಗಿದೆ. ಒಂದೇ ಮಾತಲ್ಲಿ ಹೇಳುವುದಾದರೆ ಇದು ಪರಮ ಆತ್ಮದ್ರೋಹದ ಪ್ರಯತ್ನವೇ ಆಗಿದೆ. ಏಕೆಂದರೆ ಈವರೆಗೆ ಅವರಾಗಲೀ, ಅವರ ಪಕ್ಷವಾಗಲೀ ಗಾಂಧಿ ಮತ್ತು ಅವರ ದರ್ಶನವನ್ನು ತಾವು ತಪ್ಪಾಗಿ ಅರ್ಥೈಸಿಕೊಂಡಿದ್ದೆವು; ಆದರೆ ನಮಗೀಗ ಹಲವು ನೆಲೆಗಳಲ್ಲಿ ಗಾಂಧಿ ತತ್ವಗಳ ಅಗತ್ಯ ಕಂಡುಬಂದಿದೆ ಎಂದು ಬಹಿರಂಗವಾಗಿ ಯಾವುದೇ ಪಶ್ಚಾತ್ತಾಪವನ್ನು ದಾಖಲಿಸಿಲ್ಲ. ಬದಲಿಗೆ ಗಾಂಧಿಯನ್ನು ಕೇವಲ ಸ್ವಚ್ಛತಾ ಕಾರ್ಯಕ್ರಮದ ಪ್ರತೀಕವನ್ನಾಗಿ ಕುಬ್ಜಗೊಳಿಸಿ ಹಾಸ್ಯಾಸ್ಪದಗೊಳಿಸುವ ಪ್ರಯತ್ನವನ್ನು ಮಾಡಲಾಗಿದೆ.

ನಿಜ, ಇತ್ತೀಚಿನ ವರ್ಷಗಳಲ್ಲಿ ಖಾದಿ ಹೆಚ್ಚು ಜನಪ್ರಿಯವಾಗುತ್ತಿದೆ. ಆದರೆ ಅದು ಜನಪ್ರಿಯವಾಗುತ್ತಿರುವುದು, ಗಾಂಧಿ ಸೂತ್ರಗಳು ಮತ್ತು ಮೌಲ್ಯಗಳನ್ನು ಧಿಕ್ಕರಿಸಿ ಜಾರಿಯಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳ ನೀತಿಯಿಂದ ಸೃಷ್ಟಿಯಾದ ನವಶ್ರೀಮಂತ ಸಮಾಜದ ಒಂದು ಪ್ರತಿಷ್ಠಿತ ವರ್ಗದ ವಸ್ತ್ರ ವಿನ್ಯಾಸವಾಗಿ. ಜೊತೆಗೆ ಅದರ ಪಾಲಿ(ಮಿಶ್ರ) ಆವೃತ್ತಿಯಲ್ಲಿ. ಅದು ಹೆಚ್ಚಾಗಿ ಸುಳ್ಳರ, ಕಳ್ಳರ, ಲೂಟಿಕೋರ ಖದೀಮರ ಸಮವಸ್ತ್ರವಾಗುತ್ತಿದೆ. ಮೋದಿಯವರು ಖಾದಿಯ ಪ್ರೋತ್ಸಾಹಕರಾಗಿ ಅದರ ವ್ಯಾಪಾರವನ್ನು ಹೆಚ್ಚಿಸಬಲ್ಲರಾದರೆ ಅದು ಈ ವಲಯಗಳಲ್ಲಿ ಎಂಬುದು ಮೋದಿ ಸಮರ್ಥಕರಿಗೆ ಗೊತ್ತಿದ್ದರೆ ಒಳ್ಳೆಯದು.

ಇನ್ನೊಂದು ಮಾತೂ ನಿಜ. ಅದೆಂದರೆ, ಮೋದಿ ಸರ್ಕಾರದ ಮುನ್ನ ಇದ್ದ; ಗಾಂಧೀಜಿಯ ದಾರ್ಶನಿಕ ವಾರಸುದಾರಿಕೆಯನ್ನು ಕೊಚ್ಚಿಕೊಳ್ಳುವ ಕಾಂಗ್ರೆಸ್ ಪಕ್ಷದ ಎರಡು–ಮೂರು ಸರ್ಕಾರಗಳೂ ಮೋದಿಯುವರು ಅನುಸರಿಸುತ್ತಿರುವ ಆರ್ಥಿಕ ನೀತಿಗಳನ್ನೇ ಅನುಸರಿಸುತ್ತಿದ್ದವು. ಹಾಗೆ ನೋಡಿದರೆ ಅವೇ ಈ ದೇಶದಲ್ಲಿನ ಈ ನೀತಿಗಳ ಆದ್ಯ ಪ್ರವರ್ತಕರು ಕೂಡ. ಆದರೆ ಆ ಸರ್ಕಾರಗಳು ಎಂದೂ ಚರಕದ ಜೊತೆ ಗಾಂಧಿಯ ಜಾಗದಲ್ಲಿ ತನ್ನ ಯಾವುದೇ ರಾಜಕೀಯ ನಾಯಕರ ಚಿತ್ರವನ್ನು ಜೋಡಿಸುವ ಭಂಡ ಪ್ರಯತ್ನ ಮಾಡಲಿಲ್ಲ. ಆದರೆ ಮೋದಿ ಸರ್ಕಾರ ಈ ಪ್ರಯತ್ನ ಮಾಡುತ್ತಿರುವುದನ್ನು ನೋಡಿದರೆ,

ಯಾವುದೇ ರಾಷ್ಟ್ರೀಯ ಹೋರಾಟದ ಪರಂಪರೆ ಇಲ್ಲದೆ ಬಲಿಷ್ಠ ರಾಷ್ಟ್ರೀಯತೆಯನ್ನು ಪ್ರತಿಪಾದಿಸಬೇಕಾಗಿ ಬಂದಿರುವ ತನ್ನ ದಟ್ಟ ದರಿದ್ರ ಸ್ಥಿತಿಯನ್ನು ಅದು ಸಹಿಸಿಕೊಳ್ಳಲಾಗದೆ, ಇತಿಹಾಸವನ್ನೇ ನುಂಗಿ ನೊಣೆದು ತನ್ನದೇ ಹೊಸ ಇತಿಹಾಸವನ್ನು ಬರೆಯುವ ಪ್ರಯತ್ನದಲ್ಲಿದ್ದಂತಿದೆ. ಇದು ಅತ್ಯಂತ ಅಪಾಯಕಾರಿ ನಡೆಯಾಗಿದೆ.

ಮೋದಿಯವರು ಇಂದು ಚುನಾವಣಾ ಬಹುಮತ ಪಡೆದು (ಅದೂ ಶೇ.೩೧ರಷ್ಟು ಮಾತ್ರ) ಅಧಿಕಾರದಲ್ಲಿದ್ದಾರೆ. ಕಾನೂನಿಗೆ ವಿರುದ್ಧವಲ್ಲದ ಯಾವುದೇ ಕ್ರಮ ಕೈಗೊಳ್ಳುವ ಅಧಿಕಾರವನ್ನು ಅವರ ಸರ್ಕಾರ ಹೊಂದಿದೆ. ಇನ್ನು ನೈತಿಕತೆ ಅನ್ನವುದು ಇಂದು ತರ್ಕಶಾಸ್ತ್ರಿಗಳ ಮಾತಿನ ವೈಖರಿಗಳ ಮಧ್ಯೆ ಸಿಲುಕಿ ನುಜ್ಜುಗುಜ್ಜಾಗಿ ತನ್ನ ಜೀವವನ್ನೇ ಕಳೆದುಕೊಂಡಿದೆ. ಹೀಗಿರುವಾಗ ನಮ್ಮ ಗಾಂಧಿವಾದಿಗಳಿಗೆ ಏನಾಗಿದೆ? ವಿಶೇಷವಾಗಿ, ನಮ್ಮ ರಾಜ್ಯದ ಅಳಿದುಳಿದಿರುವ ಗಾಂಧಿವಾದಿಗಳು ಏನು ಮಾಡುತ್ತಿದ್ದಾರೆ? ಗಾಂಧಿ ಮತ್ತು ಗಾಂಧಿ ಪರಂಪರೆಗೆ ಎಸಗಲಾಗುತ್ತಿರುವ ಈ ಅಪಚಾರದ ವಿರುದ್ಧ ಅವರಿಂದ ಏಕೆ ಎಲ್ಲೂ ಯಾವ ಸೊಲ್ಲು ಕೇಳಿಬರುತ್ತಿಲ್ಲ?

–ಡಿ.ಎಸ್. ನಾಗಭೂಷಣ್

*****

ನನಗೆ ಜನಪದ ವಿಚಾರದ ಫೆಬ್ರವರಿ ಸಂಚಿಕೆಯ ಎರಡು ಪ್ರತಿಗಳು ಬಂದಿವೆ. ದಯಮಾಡಿ ಭವಿಷ್ಯದಲ್ಲಿ ಒಂದು ಪ್ರತಿಯನ್ನು ಕಳುಹಿಸಿಕೊಡುವಂತೆ ನೋಡಿಕೊಳ್ಳಿ. ಶ್ರೀಮತಿ ಸಂಧ್ಯಾ ಮತ್ತು ಶ್ರೀ ಪ್ರಾಣೇಶ್ ನಿಮ್ಮನ್ನು ಭೇಟಿ ಮಾಡಲು ಬಂದಿದ್ದನ್ನು ತಿಳಿದು ನನಗೆ ಸಂತೋಷವಾಯಿತು. ಪ್ರೀಸಂ ನನ್ನ ತಂದೆಯ "ನೂರರ ನೆನಪು" ಪ್ರಕಟಿಸಿರುವ ವಿಷಯವನ್ನು ನೀವು ಪ್ರಸ್ಥಾಪಿಸಿದ್ದಕ್ಕಾಗಿ ಸಂತೋಷವಾಯಿತು. ನಿಮ್ಮ ಮೊಮ್ಮಕ್ಕಳು ಸಾರ್ವಜನಿಕ ಹಿತಾಸಕ್ತಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದನ್ನು ತಿಳಿದು ಸಂತೋಷವಾಯಿತು.

–ಎನ್. ಎಸ್. ಸುಬ್ಬಣ್ಣ

ಜನಪದ ಟ್ರಸ್ ಸಮಾಚಾರ

ಜನಪದ ಸೇವಾ ಟ್ರಸ್ಟಿಗೆ ಭೇಟಿ ಕೊಡುವವರಲ್ಲಿ ವೈವಿಧ್ಯತೆ ಇರುತ್ತದೆ. ಪ್ರತಿಯೊಬ್ಬರ ಭೇಟಿಯೂ ವಿಶಿಷ್ಟವಾಗಿರುತ್ತದೆ. ಹಾಗೇ ಭೇಟಿ ಕೊಟ್ಟವರಲ್ಲಿ ಸಹಸ್ರಬುಧೆ ಅವರದು. ಸಹಸ್ರಬುಧೆ ಇಂಜಿನಿಯರ್‌ಯಾಗಿ ಇದ್ದವರು. ಟ್ರಸ್ಟ್ ಮಾಡುತ್ತಿರುವ ಖಾದಿ ಕೆಲಸ ನೋಡಲು ಬಂದಿದ್ದರು. ಅವರು ಖಾದಿಗೆ ಸಂಬಂಧಿಸಿದ ವಾತಾವರಣವನ್ನು ಟ್ರಸ್ಟಿನಲ್ಲಿ ನೋಡಿ ಸಂತೋಷಗೊಂಡು, ಪೆಟ್ಟಿಗೆ ಚರಖದ ಮೇಲೆ ನೂಲು ತೆಗೆಯುವ ಪ್ರಶಿಕ್ಷಣದ ಕಾರ್ಯಗಾರವನ್ನು ನಡೆಸಲು ಮುಂದೆ ಬಂದರು. ಹಲವಾರು ಖಾದಿ ಪ್ರೇಮಿಗಳು ಕಾರ್ಯಗಾರದಲ್ಲಿ ಭಾಗವಹಿಸಲು ಮುಂದೆ ಬಂದಿದ್ದಾರೆ.

***

ಟ್ರಸ್ಟಿನ ಹೊಸ ಜೀವನ ದಾರಿ ಕೇಂದ್ರವು ಅದರ ಹೆಸರೇ ಸೂಚಿಸುವಂತೆ ಜೀವನದಲ್ಲಿ ಹೊಸದನ್ನು ಕಂಡುಕೊಳ್ಳಲು ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಪ್ರೇರಣೆ ಕೊಡುತ್ತವೆ. ಕೇಂದ್ರದಲ್ಲಿಯ ವಾತಾವರಣ ರಂಗಭೂಮಿ ಕಲಾವಿದರನ್ನೂ ಆಕರ್ಷಿಸಿದೆ. ಬೆಂಗಳೂರಿನಲ್ಲಿರುವ ಸಂಚಾರಿ ಥಿಯೇಟರ್ಸ್ ಎಂಬ ಸಂಸ್ಥೆಯ ರಂಗಭೂಮಿ ಕಲಾವಿದರು ಟ್ರಸ್ಟಿಗೆ ಭೇಟಿಕೊಟ್ಟರು. ಹೊಸಜೀವನ ದಾರಿ ಕೇಂದ್ರದಲ್ಲಿ ರಂಗಭೂಮಿಗೆ ಸಂಬಂಧಿಸಿದ ಶಿಕ್ಷಣ ಶಿಬಿರ ನಡೆಸಲು ಯೋಚಿಸಿದ್ದಾರೆ. ಭೇಟಿ ಕೊಟ್ಟ ರಂಗಭೂಮಿ ಕಲಾವಿದರಲ್ಲಿ ಗಜಾನಂದ್ ನಾಯ್ಕ್, ಮಂಗಳ ಎನ್ ಮತ್ತು ರಘು ಹಾಗೂ ಇನ್ನಿತರ ಸ್ನೇಹಿತರು ಇದ್ದರು.

***

ಅಮೇರಿಕಾದ ಪ್ರಜೆಯಾಗಿ ಅಲ್ಲಿಯೇ ಇರುವ ಪಂಜಾಬ್ ಮೂಲದ ಹರಕೃಷ್ಣ ಕೌರ್ ಎಂಬ ಮಹಿಳೆ ಭೇಟಿಕೊಟ್ಟರು. ಅವರು ಫಕುವೋಕಾರ "ಒಂದು ಹುಲ್ಲಿನ ಕ್ರಾಂತಿ" ಎಂಬ ಪುಸ್ತಕದ ಪ್ರಭಾವಿತರಾಗಿ ಸರಳ ಜೀವನಕ್ಕೆ ಮಾರುಹೋಗಿದ್ದಾರೆ. ಅದರಂತೆ ಜೀವನ ನಡೆಸಲು ಪ್ರಯತ್ನಿಸುತ್ತಿದ್ದಾರೆ. ಖಾದಿ ಬಟ್ಟೆಯನ್ನು ಖರೀದಿಸಿದಲ್ಲದೆ ಟ್ರಸ್ಟಿನ ಕೆಲಸ ಕಾರ್ಯಗಳಲ್ಲಿ ಭಾಗವಹಿಸುವ ತಮ್ಮ ಇಚ್ಚೆಯನ್ನು ವ್ಯಕ್ತಪಡಿಸಿದರು.

***

ಮೈಸೂರು ನಗರದ ಹಳೆಯ ಸಾರ್ವಜನಿಕ ಸಂಸ್ಥೆ ವನಿತಾಸದನ. ಈ ಸಂಸ್ಥೆಯನ್ನು ಶ್ರೀಮತಿ ಸುಶೀಲಮ್ಮ ನಾಗೇಶ್ವರ ರಾವ್ ಸ್ಥಾಪಿಸಿದ್ದು ಬಟ್ಟೆ ನೇಯ್ಗೆ, ಬಟ್ಟೆ ಮೇಲೆ ಪ್ರಿಂಟಿಂಗ್, ಚಾಪೆನೇಯ್ಗೆ, ಸೋಪು ತಯಾರಿಕೆ ಮತ್ತು ಶಿಕ್ಷಣ ಮುಂತಾದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿರುವ ಸಂಸ್ಥೆ, ಸಧ್ಯ ವನಿತಾಸದನದ ಚಟುವಟಿಕೆಗಳನ್ನು ನೋಡಿಕೊಳ್ಳುತ್ತಿರುವ ಅನುಸೂಯ ಮತ್ತು ಶ್ಯಾಮಲರವರು ಭೇಟಿಕೊಟ್ಟರು. ಖಾದಿ ಉತ್ಪಾದನೆ ಮತ್ತು ಅದರ ಮಾರಾಟ ನಡೆಯುತ್ತಿದೆ. ಕೆಲವರು ಇ-ಅಂಚೆ ಮೂಲಕವೂ ಬಟ್ಟೆ ಖರೀದಿಸುತ್ತಾರೆ.

ಮುಸ್ಸಂಜೆಯ ಬೆಳಕಿನಲ್ಲಿ.....4

- ಸುರೇಂದ್ರ ಕೌಲಗಿ

ಸಾಮಾನ್ಯವಾಗಿ ಜನ್ಮಕೊಟ್ಟ ತಾಯಿಯ ನೆನಪು ದಿನಿತ್ಯದ ಪ್ರಾಪಂಚಿಕ ಜಂಜಾಟದಲ್ಲಿ ನೆನಪಿಗೆ ಬರುವುದು ವಿರಳ. ಕೆಲ ವಿಶೇಷ ಸಂದರ್ಭದಲ್ಲಿ ನೆನಪು ಬರಬಹುದು, ಅದು ಕ್ಷಣಿಕ. ತಾಯಿಯ ಬಗ್ಗೆ ಪ್ರೇಮಪೂರ್ವಕವಾಗಿ ಜ್ಞಾಪಿಸಿಕೊಳ್ಳುವ ಮತ್ತು ತಾಯಿಯ ವ್ಯಕ್ತಿತ್ವವನ್ನು ಪುನಃ ಅರ್ಥಮಾಡಿಕೊಳ್ಳುವ ಅವಕಾಶ ಬಂದಾಗ ಮಾತ್ರ ತಾಯಿಯ ಸ್ಮರಣೆ ಅರ್ಥವರ್ತಾಗುತ್ತದೆ ಮತ್ತು ಮುಸ್ಸಂಜೆಯ ಬೆಳಕಿನಲ್ಲಿ ಆಶೀರ್ವಾದ ರೂಪದಲ್ಲಿ ಮಿಂಚುತ್ತದೆ. ಇತ್ತೀಚೆಗೆ ನನ್ನ ತಾಯಿಯ ಸ್ಮರಣೆಯನ್ನು ಮಾಡಿಕೊಳ್ಳಬೇಕಾದಂಥ ಅವಕಾಶ ತಾನಾಗಿಯೆ ಬಂತು. ಸಮಾಜವಾದಿ ಯುವ ಮಿತ್ರರಾದ ಡಿ.ಎಸ್. ನಾಗಭೂಷಣ್ ರವರು ತಮ್ಮ ಹೊಸ ಮನುಷ್ಯ ಪತ್ರಿಕೆಗಾಗಿ ಬರಹವೊಂದನ್ನು ಆಹ್ವಾನಿಸಿದರು. ಜೀವನದಲ್ಲಿ ಮುಖಾಮುಖಿಯಾದ ಯಾವುದೇ ಆದರ್ಶ ಸ್ತ್ರೀ ಬಗ್ಗೆ ಬರೆದು ಕಳುಹಿಸಲು ಸೂಚಿಸಿದರು. ಈ ಸಂದರ್ಭಕ್ಕಾಗಿ ನನ್ನ ತಾಯಿಯನ್ನು ಸ್ಮರಿಸಿಕೊಂಡೆ. ಆಗ ಏಳು ದಶಕಗಳಷ್ಟು ಹಿಂದಿನ ಬಾಲ್ಯ ಜೀವನದ ನೆನಪನ್ನು ಕೆದಕುವ ಸುಖಮಯ ಅನುಭವ ಉಂಟಾಯಿತು. ಇಂಥ ಮದುರಾಕ್ಷಣವನ್ನು ಮುಸ್ಸಂಜೆಯ ಹೊತ್ತಿನಲ್ಲಿ ಮೆಲುಕು ಹಾಕಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾಗಭೂಷಣ್ ರವರಿಗೆ ನನ್ನ ಕೃತಜ್ಞತೆಗಳು. ಎಲ್ಲೋ ಇದ್ದ ತಾಯಿಯ ಭಾವಚಿತ್ರವು ಕೈಗೆ ಸೇರಿತು ಮತ್ತು ಪ್ರಾಶಸ್ತ್ಯ ಪಡೆಯಿತು. ಆದರ್ಶ ಮಹಿಳೆಯ ರೂಪದಲ್ಲಿ ನಾನು ನನ್ನ ತಾಯಿಯ ವ್ಯಕ್ತಿತ್ವವನ್ನು ಚಿತ್ರಿಸಿದ್ದು ಹೀಗೆ.

ಬೆಚ್ಚನೆಯ ಮನೆಯಾಗಿ, ವೆಚ್ಚಕ್ಕೆ ಹೊನ್ನಾಗಿ, ಇಚ್ಚೆ ಅರಿಯುವ ಸತಿಯಾಗೇ, ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ, ಎಂಬ ಸರ್ವಜ್ಞನ ಈ ತ್ರಿಪದಿ ಗೊತ್ತಿಲ್ಲದ ಕನ್ನಡಿಗನ್ಯಾರು. ತ್ರಿಪದಿಯಲ್ಲಿಯ ಮಾತು ಎಲ್ಲಾ ಗೃಹಸ್ಥರ ಸಾಮಾನ್ಯ ಅನುಭವವೇ ಆಗಿದೆ. ಗೃಹ ಜೀವನ ಸ್ವರ್ಗಕ್ಕಿಂತ ಮೇಲಾಗಿರಬೇಕಾದರೆ ಗೃಹ ಒಡತಿಯ ಸಾಮರ್ಥ್ಯ ಎಷ್ಟು ಉಜ್ವಲವಾಗಿರಬೇಕು! ಆ ಗೃಹಒಡತಿ ಪತ್ನಿಯಾಗಿರಬಹುದು ಅಥವಾ ತಾಯಿಯಾಗಿರಬಹುದು. ಗೃಹಜೀವನ ನಡೆಸುವುದರಲ್ಲಿ ತಾಯಿಯಾಗಿ ಮತ್ತು ಪತ್ನಿಯಾಗಿ ಅವಳ ಪಾತ್ರ ಹೆಣ್ಣಿನದೇ ಆಗಿದೆ. ಮುಂದೆ ಜನಿಸುವ ಮಗಳು ಕೂಡ ಹೆಣ್ಣೇ ಆಗಿರುತ್ತಾಳೆ. ಆದರೆ ತಾಯಿ, ಪತ್ನಿ ಅಥವಾ ಪುತ್ರಿಯ ಧಮನಿಗಳಲ್ಲಿ ತಾಯ್ತನದ ರಕ್ತವೇ ಹರಿಯುತ್ತಿರುತ್ತದೆ. ತಾಯ್ತನದ ಸ್ವಧರ್ಮದ

ಕಾರಣದಿಂದಾಗಿಯೇ ನನ್ನ ಹೆತ್ತ ತಾಯಿ ನನಗೆ ಆದರ್ಶ ಮಹಿಳೆಯಾಗಿದ್ದಾಳೆ. ತಂದೆಗೆ ಆರ್ಥಿಕ ಕಷ್ಟಗಳಿದ್ದರೂ ದೈನಂದಿನ ಗೃಹ ಜೀವನದಲ್ಲಿ ಯಾವುದೇ ಪ್ರಕಾರದ ಅಡ್ಡಪರಿಣಾಮಗಳು ಉಂಟಾಗದಂತೆ ಏಕರೂಪವಾಗಿ ದೊಡ್ಡವನನ್ನಾಗಿ ಮಾಡಿದ್ದು ನನ್ನ ತಾಯಿಗೆ ಫಲ್ಗು. ದೊಡ್ಡವನಾಗಿ ಬಿಹಾರ್ ರಾಜ್ಯಕ್ಕೆ ಹೋದಾಗ ಮೃತರಿಗೆ ತರ್ಪಣ ಬಿಡುವ ಸ್ಥಳ ಪವಿತ್ರ ನದಿಯೇ ಈ ಫಲ್ಗು ಎಂದು ಗೊತ್ತಾಯಿತು. ನನ್ನ ತಾಯಿಗೆ ಫಲ್ಗು ಹೆಸರು ಬರಲು ಈ ಫಲ್ಗು ನದಿ ಎಂದು ಗೊತ್ತಾದಾಗ ನನಗೆ ಸಂತೋಷವಾಯಿತು. ಸೇತುವೆ ಮೇಲೆ ಹೋಗುವಾಗಲೆಲ್ಲಾ ಪಲ್ಗು ನದಿಗೆ ನಮಸ್ಕರಿಸುತ್ತಿದ್ದೆ. ಫಲ್ಗು ನನ್ನ ತಾಯಿಯ ತವರುಮನೆ ಹೆಸರು. ಮದುವೆಯಾದ ಮೇಲೆ ಅತ್ತೆಯ ಮನೆಯವರು ತಾಯಿಯ ಹೆಸರನ್ನು ಪದ್ಮಾವತಿ ಎಂದಾಗಿ ಬದಲಾಯಿಸಿದರು. ಅದಕ್ಕೆ ಕಾರಣ ನನ್ನ ತಂದೆಯ ಹೆಸರು ವೆಂಕಟೇಶ. ಹೀಗೆ ಪದ್ಮಾವತಿ-ವೆಂಕಟೇಶ್ ಜೊತೆಯಾಗಿ ಗೃಹಜೀವನದ ಹೊಣೆಗಾರಿಕೆಯನ್ನು ಅವರು ನಿರ್ವಹಿಸಿದ್ದರಿಂದಲೇ ಇವತ್ತು ನಾನೊಬ್ಬ ವ್ಯಕ್ತಿಯಾಗಿರುವುದು. ನನ್ನ ತಾಯಿ ಆದರ್ಶ ಹೆಣ್ಣೆಂದು ಬಾವಿಸುವುದಕ್ಕೆ ಮತ್ತೊಂದು ಕಾರಣ. ವರ್ತಮಾನದ ಜೊತೆಗೆ ಹೊಂದಿಕೊಳ್ಳುತ್ತಿದ್ದ ಅವರ ಸ್ವಭಾವ ನಲವತ್ತರ ದಶಕಗಳಲ್ಲಿ ಆಧುನಿಕ ದ್ವಿಚಕ್ರಗಳು ಇಲ್ಲದೇ ಇದ್ದ ಕಾಲದಲ್ಲಿ ಸೈಕಲ್ಲೇ ಆಧುನಿಕ ವಾಹನವಾಗಿತ್ತು. ಅದನ್ನು ನನ್ನ ತಾಯಿ ನಡೆಸುವುದನ್ನು ಕಲಿತರು ಮತ್ತು ಅದನ್ನು ಸಂದರ್ಭಾನುಸಾರ ಉಪಯೋಗಿಸುತ್ತಿದ್ದರು. ಆಗಿನ ಕಾಲದ ಪ್ರಚಲಿತ ಕ್ರೀಡೆ ಎಂದರೆ ಬ್ಯಾಡ್‌ಮಿನ್‌ಟನ್. ಅದನ್ನು ಕೂಡ ಅವರು ಆಡುವುದನ್ನು ಕಲಿತು ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ನನ್ನ ತಂದೆಯೊಡನೆ ಬೆಳಿಗ್ಗೆ ಮತ್ತು ಸಂಜೆ ವಾಯುವಿಹಾರಕ್ಕೂ ಹೋಗುತ್ತಿದ್ದರು. ಅದು ಗಾಂಧೀಜಿಯವರ ಕಾಲವೂ ಆಗಿತ್ತು. ಆದ್ದರಿಂದ ಖಾದಿಯ ಪ್ರಚಾರ ಜೋರಾಗಿತ್ತು. ಅದರ ಪ್ರಭಾವಕ್ಕೆ ಒಳಗಾದ ನನ್ನ ತಾಯಿ ಚರಕದ ಮೇಲೆ ನೂಲು ತೆಗೆಯುವುದನ್ನು ಕಲಿತರು. ನೂಲು ತೆಗೆದಾದ ಮೇಲೆ ಅದನ್ನು ಲಡಿ ರೂಪದಲ್ಲಿ ಕಟ್ಟಿ ಸ್ಥಳೀಯ ಖಾದಿ ಭಂಡಾರದವರಿಗೆ ಮಾರಿ ಸ್ವಲ್ಪ ಕಾಸನ್ನು ಸಂಪಾದಿಸುತ್ತಿದ್ದರು. ಪೌರಾಣಿಕ ಸಾಹಿತ್ಯ ಓದುತ್ತಿದ್ದರು. ಎಲ್ಲ ಪ್ರಮುಖ ಹಬ್ಬಗಳನ್ನು ತಪ್ಪದೇ ಆಚರಿಸುತ್ತಿದ್ದರು. ಅದರಿಂದಾಗಿ ಮನೆಯಲ್ಲಿ ಒಳ್ಳೆಯ ವಾತಾವರಣ ಮೂಡುತ್ತಿತ್ತು. ಹಬ್ಬದ ದಿನ ನಾವೆಲ್ಲ ಹುಡುಗರು ಸಂಭ್ರಮದಿಂದ ಇರುತ್ತಿದ್ದವು. ನಾನು ತಪ್ಪು ಮಾಡಿದಾಗ ಎಂದು ಶಿಕ್ಷಿಸಿದ್ದಾಗಲಿ, ರೇಗಿದ್ದಾಗಲಿ. ನೆನಪಿಲ್ಲ ಆರ್ಥಿಕವಾಗಿ ಕಷ್ಟವಿದ್ದರೂ ಅಣ್ಣನನ್ನು ದೂರದ ಪುಣೆಗೆ ಓದಲು ಕಳುಹಿಸಿ ಸಂಸಾರವನ್ನು ಜಾಣ್ಮೆಯಿಂದ

ನಿರ್ವಹಿಸಿದರು. ನಾನು ಅಂತರ್-ಸಂಪ್ರಾದಾಯ ಹುಡುಗಿಯನ್ನು ಮದುವೆಯಾಗಲು ಅದನ್ನು ಧರ್ಮ ನಿಷ್ಠಾವಂತ ತಾಯಿ ವಿರೋಧಿಸಲಿಲ್ಲ. ಆದರೆ ಸಹ ಬಾಳ್ವೆಯಿಂದ ದೂರ ಉಳಿದುದು ಮಾತ್ರ ನನಗೆ ತುಂಬ ನೋವಿನ ಸಂಗತಿಯಾಗಿತ್ತು. ಸಮಸ್ಯೆಗೆ ಪರಿಹಾರ ಮಾತ್ರ ಸಿಗಲಿಲಲ್ಲ, ತಂದೆ ಮೊದಲೆ ತೀರಿಕೊಂಡರು. ತಾಯಿಯನ್ನು ಹತ್ತಿರದಲ್ಲಿಟ್ಟುಕೊಂಡುಅವರು ಸಮಾಧಾನವಾಗಿ ಜೀವನ ನಡೆಸುವಂತೆ ಆಗಲಿಲ್ಲವೆಂಬ ಕೊರಗಿದೆ. ಅವರು ನನಗೊಂದು ಪತ್ರ ಬರೆದಿದ್ದರು. ಅದನ್ನು ಜೋಪಾನವಾಗಿಟ್ಟುಕೊಳ್ಳಲಿಲ್ಲವಲ್ಲ ಎಂಬ ವ್ಯಥೆ ಇದೆ. ಸೊಟ್ಟ ಸೊಟ್ಟಾಗಿ ತಾಯಿ ಗೀಚಿದ್ದ ಸಾಲು ಭಾವನಾ ಭರಿತ, ಪವಿತ್ರ ಅಮೂಲ್ಯ ಅದರ ಬೆಲೆ ಉಳಿದ ಕಾಗದಕ್ಕೆ ಬಂದೀತೆ ಎಂದೆಂದಿಗೂ ಸಾಧ್ಯವಿಲ್ಲ.

ತಾಯಿಯವರು ತಮ್ಮ ಅವರ ವಯಸ್ಸಿನಲ್ಲಿ ಕೆಲಕಾಲ ಮೇಲುಕೋಟೆಯಲ್ಲಿ ನನ್ನ ಮನೆಯಲ್ಲಿದ್ದರು. ಅವರು ಪ್ರತಿನಿತ್ಯ ಚೆಲುವನಾರಾಯಣಸ್ವಾಮಿ ದೇವಸ್ಥಾನಕ್ಕೂ ಮತ್ತು ಯೋಗ ನರಸಿಂಹಸ್ವಾಮಿ ದೇವಸ್ಥಾನಕ್ಕೂ ಹೋಗುತ್ತಿದ್ದರು. ಏಕಾದಶಿಯೊಂದು ಕಟ್ಟುನಿಟ್ಟಾಗಿ ಉಪವಾಸ ಮಾಡುತ್ತಿದ್ದರು. ಉಪವಾಸದ ದಿನವು ಕೂಡ ಬೆಟ್ಟ ಹತ್ತಿ ದೇವರ ದೇವರದರ್ಶನ ಮಾಡಿಕೊಂಡು ಬರುತ್ತಿದ್ದರು. ತಾವು ನಂಬಿದ ವಿಚಾರದ ಬಗ್ಗೆ ಅವರ ನಿಷ್ಠೆ ಅನುಕರಣೀಯವಾಗಿತ್ತು. ಬದರೀಯಾತ್ರೆಗೆ ಹೋದದ್ದಕ್ಕಾಗಿ ಅವರಿಗೆ ನಿಮೋನಿಯ ಅಂಟಿಕೊಂಡಿತ್ತು. ಕೊನೆಯಲ್ಲಿ ಆ ಕಾಯಿಲೆಯಿಂದಲೇ ಬಳಲಿ ನನ್ನ ತಾಯಿ ತಮ್ಮ ಜೀವನ ಯಾತ್ರೆ ಮುಗಿಸಿದರು. ತಾಯಿಗಿಂತ ಬಂಧುವಿಲ್ಲ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ ಕೆ. ಯಶ್‌ವಂತ್ –ಮಂಗಳೂರು
ಶ್ರೀ ಕಡಿದಾಳು ಶಾಮಣ –ಭದ್ರಾವತಿ, ಶಿವಮೊಗ್ಗ
ಶ್ರೀ ಮಂಜುನಾಥ ಭಟ್, ಶ್ರೀ ದೇವೇಂದ್ರ ಬಾಬು –ಬೆಂಗಳೂರು
ಶ್ರೀ ಚಂದ್ರಶೇಖರ್ ಮೂರ್ತಿ, ಶ್ರೀ ಹೊಳಲು ಶ್ರೀಧರ್,
ಶ್ರೀ ಜಿ.ಎನ್. ಮನುಕುಮಾರ್, ಶ್ರೀ ಹೆಚ್. ಪುಟ್ಟಸ್ವಾಮಿ, –ಮಂಡ್ಯ
ಶ್ರೀ ವಿರೂಪಾಕ್ಷಗೌಡ –ಗಂಜಾಂ

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀ ಅಮೋಘವರ್ಷ ಉದಗತ್ತಿ –ಬೆಂಗಳೂರು
ಶ್ರೀ ಚಂದ್ರ ಶೇಖರ್ ತಾಳ್ಯ –ಹೊಳಲ್ಕೆರೆ

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ"

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಕರ್ನಾಟಕದಲ್ಲಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820



ಶ್ರೀಮತಿ/ ಶ್ರೀ......

Ms Sunanda K Shetty
#5, 1st Floor, Parshivadi Lbs Road,
Ghatkopar West
Mumbai
400086

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust
Melkote, Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237